ಗರಿಷ್ಠ 30 c | ಕನಿಷ್ಠ 21 c

ಸುದ್ದಿ ಸಿಂಚನ

'ಶಾಸ್ತ್ರಿಗಳ ದೈವಿಕ ಸೇವೆ ನಿರಂತರವಾಗಿರಲಿ'

ಮೂಡಿಗೆರೆ: ಪಟ್ಟಣದ ಮಹಾಂತಿನ ಮಠದ ಅರ್ಚಕ ಶ್ರೀ ಸಂಗಮೇಶ್ ಶಾಸ್ತ್ರಿಗಳು ದೈವಿಕ ಸೇವೆ ನಿರಂತರವಾಗಿರಲಿ ಶ್ರೀ ಸಿದ್ದೇಶ್ವರ ಸ್ವಾಮಿ ಹಾಗೂ ಚೌಡೇಶ್ವರಿ ದೇವಿ ನಿಮಗೆ ಸ್ಫೂರ್ತಿ ಯಾಗಿರಲಿ ಎಂದು ಪುಷ್ಪಗಿರಿ ಸಾಂಸ್ಕೃತಿಕ ಪ್ರತಿಷ್ಠಾನ ದ ಸಂಸ್ಥಾಪಕ ಡಾ.ಮೋಹನ್ ರಾಜಣ್ಣ ಹೇಳಿದರು.ಮೂಡಿಗೆರೆ ಪಟ್ಟಣದಲ್ಲಿ ಬುಧವಾರ ಬಾಳೆಹೊನ್ನೂರು ರಂಭಾಪುರಿ ಶಾಖಾ ಮಠ ಮಹಾಂತಿನಮಠದ ಅರ್ಚಕ ಶ್ರೀ ಸಂಗಮೇಶ್ ಶಾಸ್ತ್ರಿ ಸನ್ಮಾನಿಸಿ ಮಾತನಾಡಿ ಸಂಗಮೇಶ್ ಶಾಸ್ತ್ರಿ ದೇವರ ಪೂಜೆ ಕೈಂಕರ್ಯದಲ್ಲಿ ನಿರಂತರವಾಗಿ ಭಕ್ತ ರಿಗೆ ಮಾರ್ಗದರ್ಶನ ನೀಡುತ್ತಿದ್ದರು ಎಂದರು. ಶ್ರೀ ಸಂಗಮೇಶ್ ಶಾಸ್ತ್ರಿ ಮಾತನಾಡಿ, ಸಮಾಜಕ್ಕೆ ಧಾರ್ಮಿಕ ಮಾರ್ಗದರ್ಶನ ನೀಡುವುದು ನನ್ನ ಮೊದಲ ಆದ್ಯತೆ. ಮೂಡಿಗೆರೆಯ ಮಹಂತಿನ ಮಠದಲ್ಲಿ ಸೇವೆ ಮಾಡುತ್ತಿರುವುದು ಸೌಭಾಗ್ಯ ಎಂದರು. ಕಾರ್ಯಕ್ರಮ ದಲ್ಲಿ ಪುಷ್ಪಗಿರಿ ಸಾಂಸ್ಕೃತಿಕ ಪ್ರತಿಷ್ಠಾನ ಮ್ಯಾನೇಜಿಂಗ್ ಟ್ರಸ್ಟಿ ಉಮಾ ಮೋಹನ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾ ತಾಲೂಕು ಘಟಕದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಆರ್.ಕಾಂತರಾಜ್ ಮತ್ತು ಮುಖಂಡರಾದ ಪುಷ್ಪಲತಾ ನಾಗರಾಜ್ ಇದ್ದರು.

ಜೂಜಾಟ: ಓರ್ವನ ಬಂಧನ

ಬಾಳೆಹೊನ್ನೂರು: ಪಟ್ಟಣದ ಬಿಸಿಎಂ ಹಾಸ್ಟೆಲ್ ಮುಂಭಾಗ ಅಕ್ರಮವಾಗಿ ಮಟ್ಕಾ ಜೂಜಾಟದಲ್ಲಿ ತೊಡಗಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ. ಪ್ರಶಾಂತ್‌ಕುಮಾರ್ ಬಂಧಿತ ಆರೋಪಿ. ಈತ ಪಟ್ಟಣದ ಬಿಸಿಎಂ ಹಾಸ್ಟೆಲ್ ಮುಂಭಾಗದ ಗೇಟಿನ ಬಳಿಯಲ್ಲಿ ಅಕ್ರಮವಾಗಿ ಮಟ್ಕಾ ಜೂಜಾಟ ನಡೆಸುತ್ತಿರುವ ಕುರಿತು ಖಚಿತ ಮಾಹಿತಿ ಪೊಲೀಸರಿಗೆ ಬಂದ ಹಿನ್ನೆಲೆಯಲ್ಲಿ ದಾಳಿ ನಡೆಸಿದಾಗ ಅಕ್ರಮ ಬೆಳಕಿಗೆ ಬಂದಿದೆ. ಆರೋಪಿಯಿಂದ ಮಟ್ಕಾ ಸಂಖ್ಯೆ ಬರೆದಿರುವ ಚೀಟಿ, ₹300 ನಗದು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸರ್ಕಾರಿ ಕಾಲೇಜಿನ 3 ವಿದ್ಯಾರ್ಥಿಗಳಿಗೆ ರ್‍ಯಾಂಕ್



ಆರ್.ಅಕ್ಷತಾ



ಮಹಮ್ಮದ್



ಸಂಧ್ಯಾ ಎಸ್

ನರಸಿಂಹರಾಜಪುರ: ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗ, ಸಮಾಜ ಕಾರ್ಯ ವಿಭಾಗಕ್ಕೆ 2023-24 ನೇ ಸಾಲಿನ ಕುವೆಂಪು ವಿವಿ ಮಟ್ಟದಲ್ಲಿ 3 ರ್‍ಯಾಂಕ್ ಬಂದಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಧನಂಜಯ ತಿಳಿಸಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಆರ್. ಅಕ್ಷತಾ 6 ನೇ ರ್‍ಯಾಂಕ್, ಸಮಾಜ ಕಾರ್ಯ ವಿಭಾಗದಲ್ಲಿ ಸಂಧ್ಯಾ ಎಸ್. 6 ನೇ ರ್‍ಯಾಂಕ್ ಮಹಮ್ಮದ್ ಸಹಾದ್ 7 ನೇ ರ್‍ಯಾಂಕ್ ಗಳಿಸಿದ್ದಾರೆ. ಮೇ 6 ರಂದು ಕುವೆಂಪು ವಿವಿಯಲ್ಲಿ ನಡೆಯುವ 35 ನೇ ಘಟಿಕೋತ್ಸವ ಸಮಾರಂಭದಲ್ಲಿ 3 ವಿದ್ಯಾರ್ಥಿಗಳು ರ್‍ಯಾಂಕ್ ಪದಕ ಮತ್ತು ಪ್ರಮಾಣ ವಚನ ಸ್ವೀಕಾರ ಮಾಡಲಿದ್ದಾರೆ.ಉತ್ತಮ ಸಾಧನೆ ಮಾಡಿದ 3 ವಿದ್ಯಾರ್ಥಿಗಳನ್ನು ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ, ಸದಸ್ಯರು, ಕಾಲೇಜಿನ ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಕಾಫಿ ಧಾರಣೆ

- ಅರೇಬಿಕಾ ಪಾರ್ಚ್‌ಮೆಂಟ್........**23,900**
- ಅರೇಬಿಕಾ ಚೆರ್‍ರಿ........................**14150**
- ರೋಬಸ್ಟಾ ಪಾರ್ಚ್‌ಮೆಂಟ್.......**18,150**
- ರೋಬಸ್ಟಾ ಚೆರ್‍ರಿ.........................**9,800**

ರಬ್ಬರ್ ಧಾರಣೆ

- ಆರ್‌ಎಸ್‌ಎಸ್ (4)..................**247.00**
- ಆರ್‌ಎಸ್‌ಎಸ್ (5)..................**242.00**
- ಲಾಟ್ ಶೀಟ್.........................**212.00**



ಮೂಡಿಗೆರೆ ಪಟ್ಟಣದಲ್ಲಿ ಬಾಳೆಹೊನ್ನೂರು ರಂಭಾಪುರಿ ಶಾಖಾ ಮಠ ಮಹಾಂತಿನಮಠದ ಅರ್ಚಕ ಸಂಗಮೇಶ್ ಶಾಸ್ತ್ರಿ ಸನ್ಮಾನಿಸಲಾಯಿತು. ಪುಷ್ಪಗಿರಿ ಸಾಂಸ್ಕೃತಿಕ ಪ್ರತಿಷ್ಠಾನ ದ ಸಂಸ್ಥಾಪಕ ಡಾ.ಮೋಹನ್ ರಾಜಣ್ಣ, ಉಮಾ ಮೋಹನ್, ಎಚ್.ಆರ್.ಕಾಂತರಾಜ್, ಪುಷ್ಪಲತಾ ನಾಗರಾಜ್ ಇತರರಿದ್ದರು.



ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಕೊಪ್ಪ ತಾಲೂಕು ಘಟಕದ 2026-31ರ ಅವಧಿಗೆ ಚುನಾವಣೆಯಲ್ಲಿ ಆಯ್ಕೆಯಾದ ಆದರ್ಶ ಕೆ.ಕೆ, ಷಣ್ಮುಖರಾಜನ್, ಓಂಕಾರಪ್ಪ ಎಚ್.ಎನ್, ಗಂಗಾಸುಭಾಷ್, ಲತಾ ಕೆ.ಎಸ್. ಅವರನ್ನು ಶಿಕ್ಷಕರ ಸಂಘದಿಂದ ಅಭಿನಂದಿಸಲಾಯಿತು.

ಬಾರ್ ಬೀಗ ಒಡೆದು ನಗದು ಕದ್ದ ಕಳ್ಳರು

ಬಾಳೆಹೊನ್ನೂರು: ಪಟ್ಟಣದ ಬಸ್ ನಿಲ್ದಾಣದ ಸಮೀಪದ ಆಶಾ ಲಿಕ್ಕರ್‌ಬಾರ್‌ನಲ್ಲಿ ಮಂಗಳವಾರ ಮುಂಜಾನೆ ಬೀಗ ಒಡೆದು ನಗದು ಹಣವನ್ನು ಕಳವು ಮಾಡಿರುವ ಘಟನೆ ನಡೆದಿದೆ.

ಬಸ್ ನಿಲ್ದಾಣದ ಪಕ್ಕದ ಹಳೆ ಟಿಬಿ ರಸ್ತೆಯ ಆಶಾ ಲಿಕ್ಕರ್‌ಬಾರ್‌ನಲ್ಲಿ ಮುಂಜಾನೆ ಕಳ್ಳರು ಬಾರಿನ ಮುಖ್ಯದ್ವಾರ ಹಾಗೂ ಶಟರ್ಸ್ ಬೀಗ ಒಡೆದು ಒಳನುಗ್ಗಿ ಅಲ್ಲಿರುವ ಸಿಸಿಟಿವಿ ಕ್ಯಾಮೆರಾ ಹಾಳುಗೆಡವಿ ಕೌಂಟರಿನಲ್ಲಿ ಇಟ್ಟಿದ್ದರು. ₹3500 ನಗದನ್ನು ಹೊತ್ತೊಯ್ದಿದ್ದಾರೆ. ಆದರೆ ಕಳ್ಳರು ಬಾರ್‌ನಲ್ಲಿದ್ದ ಯಾವುದೇ ಮದ್ಯದ ಬಾಟಲಿ ಕಳ್ಳತನ ಮಾಡಿಲ್ಲ. ಘಟನೆ ಕುರಿತು ಬಾರ್ ಕ್ಯಾಶಿಯರ್‌ಆದರ್ಶ್ ಠಾಣೆಯಲ್ಲಿ ದೂರು ನೀಡಿದ್ದು, ಪೊಲೀಸರು ಕಳ್ಳರ ಪತ್ತೆಗೆ ಕ್ರಮಕೈಗೊಂಡಿದ್ದಾರೆ.ಬಾಳೆಹೊನ್ನೂರು ಪಟ್ಟಣದಲ್ಲಿ ಇತ್ತೀಚೆಗೆ ದಿನಸಿ ಅಂಗಡಿಯಲ್ಲಿ ಬೀಗ ಮುರಿದು ನುಗ್ಗಿರುವ ಕಳ್ಳರು ಅಂಗಡಿಯಲ್ಲಿದ್ದ ₹20 ಸಾವಿರ ಮೌಲ್ಯದ ಸಿಗರೇಟ್ ಅನ್ನು ಹೊತ್ತೊಯ್ದಿದ್ದಾರೆ. ಕೆಲವೇ ದಿನಗಳ ಅಂತರದಲ್ಲಿ ಕಳ್ಳತನ ನಡೆದಿರುವುದು ಪಟ್ಟಣದ ಅಂಗಡಿ ಮಾಲೀಕರಲ್ಲಿ ಆತಂಕವನ್ನುಂಟು ಮಾಡಿದೆ.

ನಕಲಿ ಐಎಎಸ್ ಅಧಿಕಾರಿ ಕುರಿತು ಡಿಸಿಗೆ ವರದಿ

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳ (ಸರ್ಕಾರಿ ಮೆಡಿಕಲ್ ಕಾಲೇಜು) ಡೀನ್ ಹರೀಶ್‌ರಿಂದ ವರದಿ ಸಲ್ಲಿಕೆ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಆರೋಗ್ಯ ಇಲಾಖೆ ಉನ್ನತ ಶ್ರೇಣಿಯ ಅಧಿಕಾರಿ ಎಂದು ಹೇಳಿಕೊಂಡ ನಕಲಿ ಐಎಎಸ್ ಮಿಥುನ್ ಈ ಹಿಂದಿನ ಜಿಲ್ಲಾ ಸರ್ಜನ್ ಡಾ.ಎಚ್.ಬಿ. ಚಂದ್ರ ಶೇಖರ್ ಅವರೊಂದಿಗೆ ಜಿಲ್ಲಾ ಆಸ್ಪತ್ರೆಗೆ ಆಗ್ಗಾಗ್ಗೆ ಭೇಟಿ ನೀಡುತ್ತಿದ್ದರು ಎಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಕೆಯಾಗಿರುವ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಅಷ್ಟೇ ಅಲ್ಲದೇ ಡಾ.ಚಂದ್ರಶೇಖರ್ ಅವರೊಂದಿಗೆ ಮಿಥುನ್ ಒಡನಾಟದಿಂದ ಪ್ರಭಾವಿತರಾಗಿ ಶ್ರೇಯಸ್ ಮೆಡಿಕಲ್ ಶಾಪ್ ಮಾಲೀಕರ ಸತೀಶ್ ಸಹ ಮಿಥುನ್‌ನೊಂದಿಗೆ ಹಣಕಾಸಿನ ವ್ಯವಹಾರ ನಡೆಸಿದ್ದಾರೆ ಎಂದು ಪ್ರಕರಣದ ಕುರಿತು ಜಿಲ್ಲಾಧಿಕಾರಿಗೆ ಸಲ್ಲಿಕೆಯಾಗಿರುವ ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ವರದಿಯೊಂದಿಗೆ ಈ ಹಿಂದಿನ ಜಿಲ್ಲಾಸರ್ಜನ್ ಡಾ.ಎಚ್.ಬಿ.ಚಂದ್ರಶೇಖರ್ ಹಾಗೂ ಶ್ರೇಯಸ್ ಮೆಡಿಕಲ್ ಶಾಪ್ ಮಾಲೀಕರ ಸತೀಶ್ ಅವರ ಸಮಜಾಯಿಷಿ ಸಹ ಪಡೆದು ಜಿಲ್ಲಾಧಿಕಾರಿಗಳಿಗೆ ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳ (ಸರ್ಕಾರಿ ಮೆಡಿಕಲ್ ಕಾಲೇಜು) ಡೀನ್ ಹರೀಶ್ ಸಲ್ಲಿಕೆ ಮಾಡಿದ್ದಾರೆ.



ಏನಿದು ಪ್ರಕರಣ: ಕಳೆದ ಐದಾರು ತಿಂಗಳಿನಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೆಡಿಕಲ್ ಶಾಪ್ ಮಾಲೀಕರಿಗೆ ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿ ಪೂರೈಕೆ ಟೆಂಡರ್ ಕೊಡಿಸುವುದಾಗಿ ಹೇಳಿ ಲಕ್ಷಾಂತರ ರು. ವಸೂಲಿ ಮಾಡಿದ ನಕಲಿ ಐಎಎಸ್ ಅಧಿಕಾರಿ ಮಿಥುನ್‌ನನ್ನು ಮೆಡಿಕಲ್ ಶಾಪ್ ಮಾಲೀಕರಿಗೆ ಪರಿಚಯ ಮಾಡಿದ್ದು, ಜಿಲ್ಲಾ ಸರ್ಜನ್ ಡಾ.ಎಚ್.ಬಿ.ಚಂದ್ರಶೇಖರ್ ಎಂಬ ಆರೋಪ ಕೇಳಿ ಬಂದಿದೆ. ಆರೋಗ್ಯ ಇಲಾಖೆ ಐಎಎಸ್ ಅಧಿಕಾರಿ ಎಂದು ಕೇಳಿಕೊಂಡಿದ್ದ ಮಿಥುನ್ ಚಿಕ್ಕಮ ಗಳೂರು ಜಿಲ್ಲಾ ಆಸ್ಪತ್ರೆಯ ಆಡಳಿತ ಚಟುವಟಿಕೆ ಯಲ್ಲಿ ಹಸ್ತಕ್ಷೇಪ ಮಾಡಿರುವ ಬಗ್ಗೆ ಆರೋಪ ಕೇಳಿ ಬಂದಿತ್ತು.

ಮಿಥುನ್ ಬೆಂಗಳೂರಿನ ಅಮೃತ್ ಹಳ್ಳಿ ಪೊಲೀಸ್ ಠಾಣೆಯಲ್ಲಿ ಬಂಧನವಾಗಿ ನಕಲಿ ಐಎಎಸ್ ಎಂದು ತಿಳಿಯುತ್ತಿದ್ದಂತೆ ಜಿಲ್ಲಾ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಪ್ರತಿಭಟನೆ ಸಹ ನಡೆಸಿ ಡಾ.ಚಂದ್ರಶೇಖರ್ ಅಮಾನತುಗೊಳಿಸಿ, ಬಂಧಿಸಬೇಕೆಂದು ಆಗ್ರಹಿಸಿದ್ದರು.

ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದ ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್ ಕಳೆದ ಮಾರ್ಚ್ 18 ರಂದು ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳ (ಸರ್ಕಾರಿ ಮೆಡಿಕಲ್ ಕಾಲೇಜು) ಡೀನ್ ಹರೀಶ್ ಅವರಿಗೆ ಪತ್ರ ಬರೆದು ಪ್ರಕರಣದ ಕುರಿತು ವರದಿ ನೀಡುವಂತೆ ಸೂಚಿಸಿದ್ದಾರೆ.

ಅದರಂತೆ ಡೀನ್ ಹರೀಶ್, ಎಚ್.ಬಿ.ಚಂದ್ರಶೇಖರ್ ಅವರನ್ನು ಜಿಲ್ಲಾ ಸರ್ಜನ್ ಹುದ್ದೆಯಿಂದ ಬಿಡುಗಡೆ ಮಾಡಿ, ಆ ಹುದ್ದೆಗೆ ಜಿಲ್ಲಾ ಆಸ್ಪತ್ರೆ ರುಕ್ಮಿಣಿಯಮ್ಮ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಸರ್ಜನ್ ಡಾ.ಚಂದ್ರಶೇಖರ್ ಸಾಲಿಮಠ್ ಎಸ್ ಅವರನ್ನು ಪ್ರಭಾರಿಯಾಗಿ ನಿಯೋಜಿಸಲಾಗಿತ್ತು. ಜತೆಗೆ, ಪ್ರಕರಣದ ಕುರಿತು ವರದಿ ನೀಡುವಂತೆ ಮೆಡಿಕಲ್ ಕಾಲೇಜ್ ಡೀನ್ ಇದೀಗ, ಜಿಲ್ಲಾ ಸರ್ಜನ್ ಆಗಿ ಪ್ರಭಾರಿಯಾಗಿ ನಿಯೋಜನೆ ಗೊಂಡಿರುವ ಡಾ.ಚಂದ್ರಶೇಖರ್ ಸಾಲಿಮಠ್ ಗೆ ನಿರ್ದೇಶಿಸಿದ್ದರು. ಅದರಂತೆ ಡಾ.ಚಂದ್ರಶೇಖರ್‌ಸಾಲಿಮಠ್ ಪರಿಶೀಲಿಸಿ ವರದಿ ಸಲ್ಲಿಕೆ ಮಾಡಿದ್ದಾರೆ.

ಈ ಮಧ್ಯೆ ದಾಖಲಾಯ್ತು ಮತ್ತೊಂದು ಪ್ರಕರಣ

ಈ ಬೆಳವಣಿಗೆಯ ನಡುವೆ ನಕಲಿ ಐಎಎಸ್ ಅಧಿಕಾರಿ ಮಿಥುನ್ ಮತ್ತು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆ ಮಾಜಿ ಸರ್ಜನ್ ಡಾ. ಚಂದ್ರಶೇಖರ್ ವಿರುದ್ಧ ಚಿಕ್ಕಮಗಳೂರು ಜಿಲ್ಲಾಸ್ಪತ್ರೆ ಮುಖ್ಯ ದಂತ ಆರೋಗ್ಯಾಧಿಕಾರಿ ಡಾ. ಪ್ರೇಮಕುಮಾರ್‌ಅವರಿಗೆ ಈ ಜೋಡಿ ಲಕ್ಷಾಂತರ ರೂಪಾಯಿ ವಂಚಿಸಿರುವ ಕುರಿತು ಡಾ. ಪ್ರೇಮಕುಮಾರ್ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಯುತ್ತಿದೆ.

ಮಾಲಿನ್ಯ ನಿಯಂತ್ರಣಕ್ಕೆ ಏಕಾಂಗಿ ಸೈಕಲ್ ಜಾಥಾ

ಬಾಳೆಹೊನ್ನೂರು: ಪ್ಲಾಸ್ಟಿಕ್ ಮಾಲಿನ್ಯ ನಿಯಂತ್ರಣ ಜಾಗೃತಿಗೆ ಏಕಾಂಗಿಯಾಗಿ ಸೈಕಲ್ ಜಾಥಾ ಕೈಗೊಂಡ ಮಂಡ್ಯದ ಉದ್ಯೋಗಿ ಗಮನ ಸೆಳೆದಿದ್ದಾರೆ.

ಟಯೋಟ ಕಂಪನಿ ಉದ್ಯೋಗಿ ಮಂಡ್ಯದ ಗಿರೀಶ್ ಪ್ಲಾಸ್ಟಿಕ್ ನಿಯಂತ್ರಣಕ್ಕೆ ಸೈಕಲ್ ಜಾಥಾ ಕೈಗೊಂಡು ಆಧುನಿಕ ಜೀವನದಲ್ಲಿ ಉಂಟಾದ ಅಪಾರ ಪ್ಲಾಸ್ಟಿಕ್ ಮಾಲಿನ್ಯ, ಮಾನವ ಮತ್ತು ಪರಿಸರದ ಮೇಲಿನ ದುಷ್ಪರಿಣಾಮದ ಜಾಗೃತಿ ಮೂಡಿಸುತ್ತಿದ್ದಾರೆ.

ಬಾಳೆಹೊನ್ನೂರಿನ ರಂಭಾಪುರಿ ಪೀಠಕ್ಕೆ ಸೈಕಲ್ ನಲ್ಲಿ ಆಗಮಿಸಿದ ಗಿರೀಶ್ ಅವರು ಪತ್ರಿಕೆಗೆ ಪ್ರತಿಕ್ರಿಯಿಸಿ, ಪ್ಲಾಸ್ಟಿಕ್ ಮಾಲಿನ್ಯ ನಿಯಂತ್ರಿಸಿ ಎಂಬ ವಿಚಾರವಾಗಿ ಮಂಡ್ಯದಿಂದ ಆರಂಭಗೊಂಡ ನನ್ನ ಸೈಕಲ್ ಜಾಥಾ ಭಾರತದ ವಿವಿಧ ಪ್ರದೇಶಗಳಲ್ಲಿ ಕ್ರಮಿಸಿ ಈವರೆಗೆ 9500 ಕಿಮೀ ಪೂರ್ಣಗೊಳಿಸಿರುವುದಾಗಿ ಹೇಳಿದರು.

ಜಾಥಾ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಕೆಯಿಂದಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ತಮ್ಮ ರಜಾ ದಿನಗಳಲ್ಲಿ ಜಾಥಾ ನಡೆಸುವುದು ಪ್ರವೃತ್ತಿ ಇದ್ದು. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ನಿಸ್ವಾರ್ಥವಾಗಿ ಭೂಮಿ, ಪರಿಸರದ ಉಳಿವಿಗೆ ಈ ಕಾರ್ಯ ಕೈಗೊಂಡಿದ್ದೇನೆ.ರಾಜ್ಯದ 19 ಜಿಲ್ಲೆಯ 160 ತಾಲೂಕುಗಳ 3000ಕ್ಕೂ ಅಧಿಕ ಗ್ರಾಮಗಳಲ್ಲಿ ಈಗಾಗಲೇ ಜಾಗೃತಿ ಜಾಥಾ ಕ್ರಮಿಸಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಜಿಲ್ಲೆಗಳಿಗೆ ಜಾಥಾ ತೆರಳಲಿದೆ. ಜನ ಜಾಗೃತಿಯೇ ನನ್ನ ಮುಖ್ಯ ಉದ್ದೇಶ. ಕಳೆದ 8 ವರ್ಷಗಳ ಹಿಂದೆ ಆರಂಭವಾದ ಜಾಥಾ ಶೀಘ್ರ10 ಸಾವಿರ ಕಿಮೀನ ಗುರಿ ಮುಟ್ಟಲಿದೆ. 1 ಲಕ್ಷ ಕಿಮೀ ತಲುಪುವ ಗುರಿಇದೆ ಎಂದು ತಿಳಿಸಿದರು.

ಸಭೆ, ಸಮಾರಂಭಗಳಿಗೆ ತೆರಳಿ ಕರಪತ್ರ ನೀಡಿ ಪ್ಲಾಸ್ಟಿಕ್ ನಿಯಂತ್ರಣಕ್ಕೆ ಮನವಿ ಮಾಡುತ್ತಿದ್ದೇನೆ. ಸರ್ಕಾರ 30 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ನಿಷೇಧಿಸಿ ಯಥೇಚ್ಛ ಪ್ಲಾಸ್ಟಿಕ್ ಬಳಸುವವರಿಗೆ ದಂಡ ವಿಧಿಸುವುದು, ಶಿಕ್ಷೆ ನೀಡುವುದು ಆಗಬೇಕಿದೆ. ಪ್ಲಾಸ್ಟಿಕ್ ನಿಯಂತ್ರಣಕ್ಕೆ ಸರ್ಕಾರ ಕಟ್ಟುನಿಟ್ಟಿನ ಕಾನೂನು ಜಾರಿಗೆ ತರಬೇಕಿದೆ. ಎಂದು ಹೇಳಿದರು.



ಪ್ಲಾಸ್ಟಿಕ್ ಮಾಲಿನ್ಯ ನಿಯಂತ್ರಣಕ್ಕೆ ಮಂಡ್ಯದಿಂದ ಏಕಾಂಗಿ ಸೈಕಲ್ ಜಾಥಾ ಕೈಗೊಂಡಿರುವ ಗಿರೀಶ್ ರಂಭಾಪುರಿ ಪೀಠದಲ್ಲಿ ಕರಪತ್ರ ನೀಡಿ ಅರಿವು ಮೂಡಿಸಿದರು.

ಸರ್ಕಾರಿ ಕೆಲಸಕ್ಕೆ ಸೇರಿದ ದಿನವೇ ನಿವೃತ್ತಿ ನಿಗದಿ

ನಿವೃತ್ತ ಸಮುದಾಯ ಸಂಘಟಕ ಲಕ್ಷ್ಮಣಗೌಡರಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಕುರಿಯಾಕೋಸ್

• **ಕನ್ನಡಪ್ರಭ ವಾರ್ತೆ** ನರಸಿಂಹರಾಜಪುರ

ಸರ್ಕಾರಿ ಕೆಲಸಕ್ಕೆ ಸೇರಿದ ದಿನವೇ ನಿವೃತ್ತಿ ದಿನವೂ ಸಹ ನಿಗಧಿಯಾಗಿರುತ್ತದೆ ಎಂದು ಕೊಪ್ಪ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಕುರಿಯಾಕೋಸ್ ತಿಳಿಸಿದರು.

ಪಟ್ಟಣ ಪಂಚಾಯಿತಿಯಲ್ಲಿ ಸಮುದಾಯ ಸಂಘಟಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಲಕ್ಷ್ಮಣ ಗೌಡರಿಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆಯಲ್ಲಿ ಮಾತನಾಡಿದರು. ಲಕ್ಷ್ಮಣಗೌಡ ಸಮುದಾಯ ಸಂಘಟಕರಾಗಿ 1998 ರಲ್ಲಿ ಸೇವೆಗೆ ಸೇರಿ ಸ್ವಸಹಾಯ ಸಂಘಗಳನ್ನು ಸ್ಥಾಪಿಸಿ ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸರ್ಕಾರ ಹಲವಾರು ಯೋಜನೆ ರೂಪಿಸಿದ್ದರು. ಪಟ್ಟಣದ ವ್ಯಾಪ್ತಿಯಲ್ಲಿ ಮಹಿಳೆಯರನ್ನು ಒಟ್ಟುಗೂಡಿಸಿ ಸ್ವಸಹಾಯ ಸಂಘಗಳನ್ನು ಸ್ಥಾಪಿಸಿ ಅವರಿಗೆ ಸರ್ಕಾರ ಸೌಲಭ್ಯ ತಲುಪಿಸಿ ಸಾಮಾಜಿಕ, ಆರ್ಥಿಕವಾಗಿ ಸಬಲರನ್ನಾಗಿಸುವ ಕೆಲಸ ಉತ್ತಮವಾಗಿ ನಿರ್ವಹಿಸಿದ್ದಾರೆ. ಇವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು.

ಪಪಂ ಮಾಜಿ ಅಧ್ಯಕ್ಷೆ ಜುಬೇದಾ ಮಾತನಾಡಿ, ಲಕ್ಷ್ಮೇಗೌಡರು ಸಮುದಾಯ ಸಂಘಟಕರಾಗಿ ಸ್ವಸಹಾಯ ಸಂಘಗಳನ್ನು ಸ್ಥಾಪಿಸಿ ಹಲವು ಸವಲತ್ತುಗಳನ್ನು ಮಹಿಳೆಯರಿಗೆ ತಲುಪಿಸಿದ್ದರು. ಮಹಿಳಾ ಸ್ವಸಹಾಯ ಸಂಘದಿಂದ ನಾಯಕತ್ವ ಗುಣ ಬೆಳೆದು ನಾನು ಪಪಂ ಅಧ್ಯಕ್ಷೆಯಾಗಲು ಸಹಕಾರಿಯಾಯಿತು. ಬೀದಿ ಬದಿ ವ್ಯಾಪಾರಿಗಳಿಗೆ ಅನೇಕ ಸವಲತ್ತು ತಲುಪಿ ಸಿದ್ದಾರೆ. ಸರ್ಕಾರಿ ನೌಕರರಾಗಿ ತಮ್ಮ ಕೆಲಸದ ಗುರುತಿನ ಹೆಜ್ಜೆ ಬಿಟ್ಟು ಹೋಗಿದ್ದಾರೆ ಎಂದರು.

ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಗುರುಮೂರ್ತಿ,ಪಪಂ ಮಾಜಿ ಸದಸ್ಯ ಮುಕುಂದ, ಸನ್ಮಾನ ಸ್ವೀಕರಿಸಿದ ನಿವೃತ್ತ ಸಮುದಾಯ ಸಂಘಟಕ ಲಕ್ಷ್ಮಣಗೌಡ ಹಾಗೂ ಸಭೆ ಅಧ್ಯಕ್ಷತೆ ವಹಿಸಿದ್ದ ಪಪಂ ಮುಖ್ಯಾಧಿಕಾರಿ ಆರ್‌ವಿ.ಮಂಜುನಾಥ್ ಮಾತನಾಡಿದರು. ಪಪಂ ಮಾಜಿ ಸದಸ್ಯ ಸೈಯದ್ ವಸೀಂ, ಮಹಿಳಾ ಒಕ್ಕೂಟದ ಭಾನುಮತಿ, ಶೈನಿ, ಎಂಜಿನಿಯರ್ ಅಶ್ವಿನಿ,ಲೆಕ್ಕಾಧಿಕಾರಿ ಉಷಾ ಅನಿಸಿಕೆ ವ್ಯಕ್ತಪಡಿಸಿದರು.

ಪೌರ ಕಾರ್ಮಿಕ ಸಂಘದ ಅಧ್ಯಕ್ಷ ಸುರೇಶ್, ಪಪಂ ಮಾಜಿ ಸದಸ್ಯರಾದ ಸೋಜಾ,ಆರ್.ಕುಮಾರಸ್ವಾಮಿ, ಸಿಬ್ಬಂದಿ ಶ್ರುತಿ, ಚಂದ್ರಶೇಖರ್‌ಇದ್ದರು.



ಪಕ್ಷಾತೀತವಾಗಿ ನಗರದ ಅಭಿವೃದ್ಧಿಗೆ ಸಹಕರಿಸಿ: ಶಾಸಕ



ನಗರಸಭೆ ಆವರಣದ ಆಹಾರ ಮಳಿಗೆಗಳನ್ನು ರಾಜ್ಯ ಪರಿಸರ ಮಾಲಿನ್ಯ ಮೌಲ್ಯಮಾಪನ ಮಂಡಳಿ ಅಧ್ಯಕ್ಷ ಎ.ಎನ್. ಮಹೇಶ್ ಉದ್ಘಾಟಿಸಿದರು. ಶಾಸಕ ತಮ್ಮಯ್ಯ, ಸಿಡಿಎ ಅಧ್ಯಕ್ಷ ಮಂಜೇಗೌಡ, ಶೀಲಾ ದಿನೇಶ್, ಪೌರಾಯುಕ್ತ ಬಸವರಾಜ್ ಮೊದಲಾದವರಿದ್ದರು.

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ನಗರದ ಜನರ ಹಿತದೃಷ್ಟಿಯಿಂದ ಏನು ಮಾಡುತ್ತೇವೆಯೋ, ಅದು ಶಾಶ್ವತವಾಗಿ ಇರುವಂತೆ ಕೆಲಸ ಮಾಡಬೇಕು. ಪಕ್ಷಾತೀತವಾಗಿ ಎಲ್ಲರೂ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಶಾಸಕ ಎಚ್.ಡಿ. ತಮ್ಮಯ್ಯ ಹೇಳಿದರು.

ನಗರಸಭೆ ಆವರಣದಲ್ಲಿ ₹2.60 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾದ ಫುಡ್ ಕೋರ್ಟ್ (ಆಹಾರ ಮಳಿಗೆಗಳು) ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ ನಾವು ಅಧಿಕಾರದಲ್ಲಿದ್ದಾಗ ಶಾಶ್ವತ ಕೆಲಸ ಮಾಡಬೇಕು ಎಂದರು.

ಫುಡ್ ಕೋರ್ಟ್‌ನಲ್ಲಿ ಗುಣಮಟ್ಟದ ತಿಂಡಿ ತಿನಿಸುಗಳನ್ನು ಕೊಡಬೇಕು. ನಗರದ ಜನತೆಗೆ ಇದರ ಸದುಪಯೋಗ ಆಗಬೇಕು. ಉತ್ತಮ ಪರಿಸರ ಹಾಗೂ ಕುಡಿವ ನೀರಿನ ಸರಿಯಾದ ವ್ಯವಸ್ಥೆ ಇಲ್ಲದಿರುವ ಕಡೆಗಳಲ್ಲಿ ತಿಂಡಿ ತಿನಿಸು ತಿಂದು ಆರೋಗ್ಯ ಹಾಳು ಮಾಡುವುದಕ್ಕಿಂತ ಫುಡ್ ಕೋರ್ಟ್ ನಲ್ಲಿ ತಿನ್ನುವುದರಿಂದ ಆರೋಗ್ಯ ಕಾಪಾಡಬಹುದು ಎಂದು ಹೇಳಿದರು.

ನಗರದ ಕೆಲವೆಡೆ ಫುಡ್ ಕೋರ್ಟ್ ನಿರ್ಮಾಣ ಮಾಡಬೇಕೆಂಬ ಬೇಡಿಕೆ ಬಂದಿದೆ. ಮುಂದಿನ ದಿನಗಳಲ್ಲಿ ನಗರಸಭೆ ಅನುದಾನ ಹಾಗೂ ವಿಶೇಷ ಅನುದಾನದಲ್ಲಿ ಇನ್ನೆರಡು ಕಡೆಗಳಲ್ಲಿ ಫುಡ್ ಕೋರ್ಟ್ ನಿರ್ಮಾಣ ಮಾಡಲು ಯೋಚನೆ ಇದೆ ಎಂದರು.

2022ರ ಮೊದಲೇ ಇಲ್ಲೊಂದು ಫುಡ್ ಕೋರ್ಟ್ ನಿರ್ಮಾಣ ಮಾಡಬೇಕೆಂದು ಆಗಿನ ಶಾಸಕರ ಜೊತೆ ಚರ್ಚೆಯಾಗಿತ್ತು. ವರಸಿದ್ಧಿ ವೇಣುಗೋಪಾಲ್ ಅಧ್ಯಕ್ಷರಾದಾಗ ಅದಕ್ಕೆ ಚಾಲನೆ ಸಿಕ್ಕಿತು. ಆ ಸಂದರ್ಭದಲ್ಲಿ ವಿರೋಧ ಕೂಡ ವ್ಯಕ್ತವಾಯಿತು. ಆಜಾದ್ ಪಾರ್ಕ್ ವೃತ್ತದ ತಳ್ಳುವ ಗಾಡಿಯವರು ತಮಗೆ ತೊಂದರೆಯಾಗುತ್ತದೆ ಎಂದು ಹೇಳಿದ್ದರು. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಫುಡ್ ಕೋರ್ಟ್ ನಿರ್ಮಾಣ ಮಾಡಲಾಯಿತು ಎಂದರು.

ರಾಜ್ಯ ಪರಿಸರ ಮಾಲಿನ್ಯ ಮೌಲ್ಯ ಮಾಪನ ಮಂಡಳಿ ಅಧ್ಯಕ್ಷ ಎ.ಎನ್. ಮಹೇಶ್ ಕಾರ್ಯಕ್ರಮ ಉದ್ಘಾಟಿಸಿದರು. ನಗರ ಸಭಾ ಅಧ್ಯಕ್ಷೆ ಶೀಲಾ ದಿನೇಶ್, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಮಂಜೇಗೌಡ, ನಗರಸಭೆ ಉಪಾಧ್ಯಕ್ಷೆ ಲಲಿತಾ ರವಿ ನಾಯಕ್, ಪೌರಾಯುಕ್ತ ಬಸವರಾಜ್, ನಗರಸಭೆ ಮಾಜಿ ಅಧ್ಯಕ್ಷ ವರಸಿದ್ಧಿ ವೇಣುಗೋಪಾಲ್, ಸಿಡಿಎ ಆಯುಕ್ತೆ ನಾಗರತ್ನ ಉಪಸ್ಥಿತರಿದ್ದರು.

ಮೂರು ಸಾವಿರ ಮನೆಗಳಿಗೆ ಹಂಚಿಕೆ | **ಭೂ ಗ್ಯಾರಂಟಿ ಯೋಜನೆಯಡಿ ಕಂದಾಯ ಗ್ರಾಮಗಳಿಗೆ ಹಕ್ಕುಪತ್ರ ವಿತರಿಸಿ ಶಾಸಕ ಕೆ.ಎಸ್.ಆನಂದ್**

14,700 ಕುಟುಂಬಕ್ಕೆ ಇ-ಸ್ವತ್ತು ನೀಡಲು ಪ್ರಾಮಾಣಿಕ ಪ್ರಯತ್ನ

ಕನ್ನಡಪ್ರಭ ವಾರ್ತೆ ಕಡೂರು

ಕ್ಷೇತ್ರದ 14,700 ಕುಟುಂಬಗಳಿಗೆ ಇ-ಸ್ವತ್ತು ದೊರಕಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದ್ದು, ಮೊದಲ ಹಂತದಲ್ಲಿ 3 ಸಾವಿರ ಮನೆಗಳಿಗೆ ಹಕ್ಕುಪತ್ರಗಳನ್ನು ವಿತರಿಸಲಾಗುತ್ತಿದೆ ಎಂದು ಶಾಸಕ ಕೆ.ಎಸ್. ಆನಂದ್ ತಿಳಿಸಿದರು.

ಕ್ಷೇತ್ರದ ಸಣ್ಣೇನಹಳ್ಳಿ ಗ್ರಾಮದಲ್ಲಿ ಭೂ ಗ್ಯಾರಂಟಿ ಯೋಜನೆಯಡಿ ಕಂದಾಯ ಗ್ರಾಮಗಳಿಗೆ ಹಕ್ಕುಪತ್ರ ಮತ್ತು ಇ-ಸ್ವತ್ತು ವಿತರಣೆಯಲ್ಲಿ ಗ್ರಾಮದ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿ ಮಾತನಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಕಂದಾಯ ಇಲಾಖೆಯಿಂದ ದಾಖಲೆ ರಹಿತ ಕುಟುಂಬಗಳಿಗೆ ಅಗತ್ಯ ದಾಖಲೆ ಒದಗಿಸಿಕೊಡಲು 94ಡಿ ಅಡಿ ಮನೆಯ ಹಕ್ಕುಪತ್ರದ ಜೊತೆ ಇ-ಸ್ವತ್ತು ದೊರಕಿಸಿಕೊಟ್ಟು ಗ್ಯಾರಂಟಿ ಬದುಕನ್ನು ಕಟ್ಟಿಕೊಡಲಾಗುತ್ತಿದೆ. ಈಗಾಗಲೇ ಕ್ಷೇತ್ರದ ಜನವಸತಿ ಪ್ರದೇಶಗಳ ದೊಡ್ಡ ದೊಡ್ಡ ಗ್ರಾಮಗಳು ಇಂದಿಗೂ ಕಂದಾಯ ಗ್ರಾಮದ ವ್ಯಾಪ್ತಿಗೆ ಒಳಪಡದೆ ದಾಖಲೆ ರಹಿತವಾಗಿರುವುದನ್ನು ಗುರುತಿಸಿ ದಿಟ್ಟ ನಿರ್ಧಾರ ಕೈಗೊಂಡು ಮೂಲಕ 240 ಕಂದಾಯ ಮತ್ತು ಉಪ ಗ್ರಾಮಗಳನ್ನು ರಚಿಸಲಾಗಿದೆ. 131 ಗ್ರಾಮಗಳು ಪ್ರಸ್ತಾವನೆ ಹಂತದಲ್ಲಿದ್ದು, 109 ಗ್ರಾಮಗಳಿಗೆ ಕಂದಾಯ ಗ್ರಾಮವಾಗಿಸಲು ಸರಕಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದರು.

ಉಡುಗೆರೆ ಗ್ರಾಪಂ ವ್ಯಾಪ್ತಿಗೆ ಒಳಪಡುವ ಸಣ್ಣೇನಹಳ್ಳಿ ಗ್ರಾಮದ ಬಹುತೇಕ ಜನರು ದಾಖಲೆ ರಹಿತವಾಗಿ ಗುರುತಿಸಿ ಕೊಂಡಿದ್ದು, ಗ್ರಾಮದಲ್ಲಿನ 103 ಫಲಾನುಭವಿಗಳಲ್ಲಿ 89 ಮನೆಗಳಿಗೆ ಹಕ್ಕುಪತ್ರ ಮತ್ತು ಇ-ಸ್ವತ್ತು ವಿತರಣೆ ಮಾಡಲಾಗುತ್ತಿದೆ. ಉಳಿದ 12 ಫಲಾನುಭವಿಗಳಿಗೆ ತಾಂತ್ರಿಕ ತೊಡಕು ಮತ್ತು ಕಂದಾಯ ಬಾಕಿಯನ್ನು ಫಲಾನುಭವಿಗಳು ಪಾವತಿಸಿದರೆ ಕೂಡಲೇ ಇ- ಸ್ವತ್ತು ಹಕ್ಕುಪತ್ರ ಒದಗಿಸಲುಸಾಧ್ಯ. ಸಣ್ಣೇನಹಳ್ಳಿಗ್ರಾಮದಿಂದ ಹಕ್ಕುಪತ್ರ ವಿತರಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದರು.

ಜಿಪಂ ಮಾಜಿ ಸದಸ್ಯ ಶರತ್ ಕೃಷ್ಣಮೂರ್ತಿ ಮಾತನಾಡಿ, ಗ್ರಾಮದಲ್ಲಿ ಅನೇಕ ಬಡ ಕುಟುಂಬಗಳು ಇಂದಿಗೂ ದಾಖಲೆ ರಹಿತವಾಗಿಯೇ ಬದುಕನ್ನು ನಡೆಸುತಿದ್ದು, ಈ ನಿಟ್ಟಿನಲ್ಲಿ ತಮ್ಮ ಮನೆಯ ಭೂ ದಾಖಲೆ ಗಟ್ಟಿಗೊಳಿಸುವ ಮೂಲಕ ರಾಜ್ಯ ಸರಕಾರ ಶಾಶ್ವತ ಗ್ಯಾರಂಟಿ ಬದುಕಿಗೆ ಅರ್ಥ ಕಲ್ಪಿಸಿಕೊಟ್ಟು ಕಂದಾಯ ಇಲಾಖೆಯಿಂದ ಪ್ರತಿಯೊಬ್ಬ ಮನೆ ಸಧೃಡಗೊಳಿಸುವ ಕಾರ್ಯ ಆಗುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಈ ಸಂದರ್ಭದಲ್ಲಿ ತಹಸೀಲ್ದಾರ್‌ಸಿ.ಎಸ್. ಪೂರ್ಣಿಮಾ, ತಾಪಂ. ಇಒ ಸಿ.ಆರ್. ಪ್ರವೀಣ್, ಪಿಕಾರ್ಡ್ ಬ್ಯಾಂಕಿನ ಮಾಜಿ ಅಧ್ಯಕ್ಷ ಡಿ.ಎಸ್. ಉಮೇಶ್, ಗ್ರಾಮದ ಮುಖಂಡರಾದ ರಂಗಪ್ಪ, ಹನುಮಂತಪ್ಪ, ರಾಮಕೃಷ್ಣ, ರೇವಣ್ಣ, ಕಂದಾಯ ನಿರೀಕ್ಷಕ ತಿಪ್ಪೇಶಪ್ಪ, ಪಿಡಿಒ ಕೆ.ಬಿ. ಚಂದ್ರ ಶೇಖರ್ ಸಿಬ್ಬಂದಿ ಇದ್ದರು.



ಕಡೂರಿನ ಸಣ್ಣೇನಹಳ್ಳಿ ಗ್ರಾಮದಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರ ಮತ್ತು ಇ- ಸ್ವತ್ತು ವಿತರಿಸಲಾಯಿತು. ಶಾಸಕ ಕೆ.ಎಸ್.ಆನಂದ್, ಸಿ.ಎಸ್. ಪೂರ್ಣಿಮಾ, ಸಿ.ಆರ್. ಪ್ರವೀಣ್, ಶರತ್ ಕೃಷ್ಣಮೂರ್ತಿ, ಡಿ.ಉಮೇಶ್ ಮತ್ತಿತರಿದ್ದರು.

ಅಕ್ರಮ ಯೂರಿಯ ಮಾರಾಟ ಮಾಡಿದವರ ಪತ್ತೆಗೆ ಒತ್ತಾಯ

ರೈತ ಸಂಘದ ರಾಜ್ಯ ಸಮಿತಿ ಸದಸ್ಯ ಗುರುಶಾಂತಪ್ಪ ಆಗ್ರಹ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ರಿಯಾಯಿತಿ ದರದಲ್ಲಿ ರೈತರಿಗೆ ಪೂರೈಕೆ ಮಾಡಬೇಕಾದ ಯೂರಿಯ ಗೊಬ್ಬರನ್ನು ಕೋಳಿ ಫಾರಂ ಮಾಲೀಕರಿಗೆ ಪೂರೈಕೆ ಮಾಡಿದವರನ್ನು ಪತ್ತೆ ಮಾಡಿ ಕಾನೂನು ಕ್ರಮಕ್ಕೆ ಒಳಪಡಿಸಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಸಮಿತಿ ಸದಸ್ಯ ಗುರು ಶಾಂತಪ್ಪ ಆಗ್ರಹಿಸಿದ್ದಾರೆ.

ಚಿಕ್ಕಮಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಇತ್ತೀಚೆಗೆ ಚಿಕ್ಕಮಗಳೂರು ತಾಲೂಕಿನ ಕೆಸವಿನಮನೆ ಗ್ರಾಮದ ರಾಜೇಶ್ ಎಂಬುವರ ಕೋಳಿ ಫಾರಂನಲ್ಲಿ ಸುಮಾರು 400 ಕ್ವಿಂಟಾಲ್ ಅಕ್ರಮವಾಗಿ ಯೂರಿಯ ಗೊಬ್ಬರ ದಾಸ್ತಾನು ಪತ್ತೆ ಮಾಡಲಾಗಿದೆ. ಈ ಪೈಕಿ ಸುಮಾರು 200 ಕ್ವಿಂಟಾಲ್‌ನಷ್ಟು ಯೂರಿಯ ಗೊಬ್ಬರನ್ನು ರೀ ಪ್ಯಾಕ್ ಮಾಡಿ ಮಾರಾಟ ಮಾಡುವುದಕ್ಕೆ ಸಿದ್ಧವಾಗಿರುವುದು ಸ್ಥಳದಲ್ಲಿ ಕಂಡು ಬಂದಿದೆ. ಐದಾರು ವರ್ಷದಿಂದ ಈ ವ್ಯವಹಾರ ನಡೆಯುತ್ತಿದೆ ಎಂದರು.ಒಬ್ಬ ಸಾಮಾನ್ಯ ರೈತ ಒಂದು ಚೀಲ ಯೂರಿಯ ಗೊಬ್ಬರ ಪಡೆಯುವುದಕ್ಕೆ ಆಧಾರ್ ಕಾರ್ಡ್, ಆರ್‌ಟಿಸಿ,ಎಫ್‌ಐಡಿ ಸೇರಿದಂತೆ ಮೊದಲಾದ ದಾಖಲೆ ನೀಡಿ ಗೊಬ್ಬರ ಪಡೆಯಬೇಕಿದೆ. ಖಾಸಗಿ ರಸಗೊಬ್ಬರ ಮಾರಾಟಗಾರರು ಬೇಕಾಬಿಟ್ಟಿ ಯೂರಿಯ ಮಾರಾಟ ಮಾಡುತ್ತಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಜತೆಗೆ, ಅಕ್ರಮವಾಗಿ ಪತ್ತೆಯಾದ ಯೂರಿಯ ಗೊಬ್ಬರ ಪೂರೈಕೆ ಮಾಡಿದ ರಸಗೊಬ್ಬರದ ಅಂಗಡಿ ಯಾವುದು ಪತ್ತೆ ಮಾಡಬೇಕು. ಕಾನೂನು ಕ್ರಮಕ್ಕೆ ಒಪ್ಪಿಸಬೇಕೆಂದು ಈ ವೇಳೆ ಒತ್ತಾಯಿಸಿದ್ದಾರೆ.

ಈ ವೇಳೆ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಡಿ. ಮಹೇಶ್, ಜಿಲ್ಲಾ ವಕ್ತಾರ ಜಿ.ಎಸ್. ಶಿವಣ್ಣ, ಹೋಬಳಿ ಘಟಕದ ಆನಂದ್ ಕುಮಾರ್ ಸೇರಿದಂತೆ ಮೊದಲಾದವರಿದ್ದರು.

ಮರು ಮತ ಎಣಿಕೆ ಫಲಿತಾಂಶ ಪ್ರಜಾಪ್ರಭುತ್ವದ ಕಗ್ಗೊಲೆಗೆ ಸಾಕ್ಷಿ

ಚಿಕ್ಕಮಗಳೂರಿನಲ್ಲಿ ಕೆಪಿಸಿಸಿ ರಾಜ್ಯ ವಕ್ತಾರ ಎಚ್.ಎಚ್. ದೇವರಾಜ್ | ಟ್ಯಾಂಪರಿಂಗ್ ಆಗಿರುವುದು ಮೇಲ್ನೋಟಕ್ಕೆ ಕಂಡಿದೆ: ಆರೋಪ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಶೃಂಗೇರಿ ಕ್ಷೇತ್ರದ ಮರು ಮತ ಎಣಿಕೆ ಫಲಿತಾಂಶ ಪ್ರಜಾಪ್ರಭುತ್ವದ ಕಗ್ಗೊಲೆಗೆ ಸಾಕ್ಷಿಯಾಗಿದೆ. ಈ ಪ್ರಕರಣದಲ್ಲಿ ಎಸ್ಐಟಿ ಹಾಗೂ ಚುನಾವಣಾ ಆಯೋಗದ ಉನ್ನತಮಟ್ಟದ ತನಿಖೆಯಾಗಬೇಕು ಎಂದು ಕೆಪಿಸಿಸಿ ರಾಜ್ಯ ವಕ್ತಾರ ಎಚ್. ಎಚ್. ದೇವರಾಜ್ ಆಗ್ರಹಿಸಿದರು.



ಬುಧವಾರ ಚಿಕ್ಕಮಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಶೃಂಗೇರಿ ಕ್ಷೇತ್ರದ ಮರು ಮತ ಎಣಿಕೆಯಲ್ಲಿ ಮೇಲ್ನೋಟಕ್ಕೆ ಟ್ಯಾಂಪರಿಂಗ್ ಆಗಿರುವುದು ಕಂಡು ಬರುತ್ತಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಮತ ಎಣಿಕೆ ಸಂದರ್ಭದಲ್ಲಿ ಎಲ್ಲಾ ಪಕ್ಷದ ಅಭ್ಯರ್ಥಿಗಳ ಪರವಾಗಿ ಇದ್ದ ಚುನಾವಣಾ ಮತ ಎಣಿಕೆ ಏಜೆಂಟ್ ಹಾಗೂ ಚುನಾವಣಾಧಿಕಾರಿಗಳ ಸಮಕ್ಷಮದಲ್ಲಿ ಟಿ.ಡಿ.ರಾಜೇಗೌಡರ ಪರವಾಗಿ ಸಿಂಧುವಾದ 255 ಮತಗಳು 3 ವರ್ಷದ ಬಳಿಕ ಹೇಗೆ ಅಸಿಂಧು ಆಗಲುಸಾಧ್ಯ ಎಂದು ಪ್ರಶ್ನಿಸಿದರು.

ಒಂದು ಕಟ್ಟಿನಲ್ಲಿ ಇದ್ದ 170 ಮತಗಳನ್ನು ಉದ್ದೇಶಪೂರ್ವಕವಾಗಿ ತಿದ್ದುಪಡಿ ಮಾಡಲಾಗಿದೆ. ಅವುಗಳಲ್ಲಿ ಎರೆಡೆರೆಡು ಗೆರೆ ಎಳೆದವರು ಯಾರು? ಸ್ಟ್ರಾಂಗ್ ರೂಂನಲ್ಲಿ ಇದ್ದ ಪೆಟ್ಟಿಗೆಗಳ ಸೀಲ್ ತೆಗೆದು ಅಕ್ರಮ ಎಸಗಿದ್ದು ಯಾರು? ನಾಪತ್ತೆಯಾದ ಮತಗಳು ಎಲ್ಲಿ ಹೋದವು ಎಂಬ ಸತ್ಯ ಹೊರ ಬರಲು ಉನ್ನತಮಟ್ಟದ ತನಿಖೆ ನಡೆಸಿ ಅನಿವಾರ್ಯ.

ಈ ಪ್ರಕರಣದಲ್ಲಿ ಚುನಾವಣಾ ಆಯೋಗ ಬಿಜೆಪಿ ಏಜೆಂಟ್ ಆಗಿ ಕೆಲಸ ಮಾಡಿದೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ ಎಂದ ಅವರು, ಈಗಿನ ರಿಟರ್ನಿಂಗ್ ಅಧಿಕಾರಿಗೆ ವಕೀಲರ ಹಾಗೂ ಚುನಾವಣಾ ಆಯೋಗದ ಮೂಲಕ ಒತ್ತಡ ಹಾಕಲಾಗಿದೆ. ಜಿಲ್ಲಾಧಿಕಾರಿಗಳು ಈ ಪ್ರಕರಣದಲ್ಲಿ ಅಕ್ರಮ ನಡೆದಿರುವ ಬಗ್ಗೆ ಕೇಂದ್ರ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ಹಾಗೂ ನ್ಯಾಯಾಲಯದಲ್ಲಿ ಪ್ರತ್ಯೇಕ ದೂರು ಸಲ್ಲಿಸಲಿ ಎಂದು ಒತ್ತಾಯಿಸಿದರು.

ಪ್ರಕರಣವನ್ನು ಕಾಂಗ್ರೆಸ್ ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿದ್ದು, ನ್ಯಾಯಾಲಯದಲ್ಲಿ ಟಿ.ಡಿ. ರಾಜೇಗೌಡ ಪರವಾಗಿ ನ್ಯಾಯಸಿಗಲಿದೆ. ಇಡೀ ದೇಶದ ಚುನಾವಣೆ ಇತಿಹಾಸದಲ್ಲಿ ಇದೊಂದು ದೊಡ್ಡ ಕಪ್ಪುಚುಕ್ಕೆ. ಜೀವರಾಜ್ ಪ್ರಕರಣ ದಲ್ಲಿ ಇಷ್ಟೊಂದು ತುರ್ತಾಗಿ ತೀರ್ಮಾನ ತಗೆದು ಕೊಂಡ ನ್ಯಾಯಾಲಯ ಗಾಯತ್ರಿ ಶಾಂತೇಗೌಡ ಪ್ರಕರಣದಲ್ಲಿ ಮೀನಾಮೇಷ ಎಣಿಸುತ್ತಿರುವುದು ಗಮನಿಸಿದರೇ ಹಲವಾರು ಅನುಮಾನಗಳಿಗೆ ಕಾರಣವಾಗಿದೆ ಎಂದರು.

ದಾವಣಗೆರೆ ಮತ್ತು ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಸಾಧಿಸಿರುವುದು ಹರ್ಷ ತಂದಿದೆ. ರಾಜ್ಯ ಸರ್ಕಾರದ ಪಂಚ ಗ್ಯಾರೆಂಟಿಗಳು ಕೆಲಸ ಮಾಡಿದೆ. ಮುಂಬರುವ ಸ್ಥಳೀಯ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ ಎಂದರು.

ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಿರೇಮಗಳೂರು ರಾಮಚಂದ್ರ, ಹಿರೇಗೌಜ ಶಿವಕುಮಾರ್, ನಗರಾಭಿವೃದ್ಧಿ ಪ್ರಾಧಿಕಾ ರದ ಅಧ್ಯಕ್ಷ ಎಚ್.ಪಿ.ಮಂಜೇಗೌಡ, ಎಂ.ಡಿ. ರಮೇಶ್, ಶಾರದಮ್ಮ, ಶಾಂತಕುಮಾರ್, ಕುಸುಮ ಭರತ್ ಇದ್ದರು.

ಫಲಿತಾಂಶ ರದ್ದು ಪಡಿಸಿ ಪ್ರಜಾಪ್ರಭುತ್ವ ಎತ್ತಿ ಹಿಡಿಯಲಿ: ರವಿಶಂಕರ್

ನರಸಿಂಹರಾಜಪುರ: ಶೃಂಗೇರಿ ಕ್ಷೇತ್ರದ ವಿಧಾನ ಸಭಾ ಚುನಾವಣೆ ಈಗಿನ ಫಲಿತಾಂಶ ರದ್ದು ಪಡಿಸಿ ಪ್ರಜಾಪ್ರಭುತ್ವ ಎತ್ತಿ ಹಿಡಿಯಬೇಕು ಎಂದು ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಎಂ.ಆರ್.ರವಿಶಂಕರ್ ಆಗ್ರಹಿಸಿದರು.



ಬುಧವಾರ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಶೃಂಗೇರಿ ಚುನಾವಣೆ ಫಲಿತಾಂಶ ದೇಶದ ಇತಿಹಾಸದಲ್ಲೇ ಕಪ್ಪು ಚುಕ್ಕೆಯಾಗಿದೆ. ಇದು ಕ್ರಿಮಿನಲ್ ಪ್ರಕರಣ. ಈ ಫಲಿಂತಾಶವನ್ನು ಕಾಂಗ್ರೆಸ್ ವಿರೋಧಿಸುತ್ತದೆ. ಈಗಾಗಲೇ ಸಿಎಂ-ಡಿಸಿಎಂ ಕ್ರಿಮಿನಲ್ ವ್ಯವಹಾರ ನಡೆದಿದೆ ಎಂದು ಹೇಳಿಕೆ ನೀಡಿದ್ದಾರೆ. ಮತ ಎಣಿಕೆಗೂ ಮುನ್ನ ಸ್ಟ್ರಾಂಗ್ ರೂಂ ಬೀಗ ತೆಗೆದಾಗ 20 ಬಾಕ್ಸ್‌ಗಳಲ್ಲಿ 9 ಬಾಕ್ಸ್‌ನ ಸೀಲ್ ಒಡೆದಿತ್ತು. ತಕ್ಷಣ ಆರ್‌ಓ ಗಮನಕ್ಕೆ ತರಲಾಯಿತು. ಮರು ಮತ ಎಣಿಕೆಗೆ ಕಾಂಗ್ರೆಸ್ ಪಕ್ಷ ವಿರೋಧ ವ್ಯಕ್ತಪಡಿಸಿತ್ತು. ರಾಜೇಗೌಡರು ವಿರೋಧಿಸಿದ್ದರು. ಚುನಾವಣಾ ಅಧಿಕಾರಿ,ಮತಗಟ್ಟೆ ಅಧಿಕಾರಿಗಳು ಮನವಿಗೆ ಮಾನ್ಯತೆ ನೀಡದೆ ಎಣಿಕೆ ಮಾಡಿದ್ದಾರೆ. ಮತ ಎಣಿಕೆ ಸಂದರ್ಭದಲ್ಲಿ ರಾಜೇಗೌಡರಿಗೆ ಬಂದ ಅಂಚೆ ಮತಗಳ ಕಟ್ಟು ನುಜ್ಜು ಗುಜ್ಜಾಗಿತ್ತು.ಈ ಬಗ್ಗೆ ತನಿಖೆಯಾಗಬೇಕು ಎಂದು ಒತ್ತಾಯಿಸಿದರು.

2023ರಲ್ಲಿ ಸೋತ ಅಭ್ಯರ್ಥಿ ಜೀವರಾಜ್ ಹೈಕೋರ್ಟಿಗೆ ದೂರು ದಾಖಲಿಸಿದ್ದರು. ಆದರೆ, 2023ರಲ್ಲಿ ಎಣಿಕೆ ಯಲ್ಲಿದ್ದ ಆರ್‌ಓ ಮೇಲೆ ದೂರು ದಾಖಲಿಸಿಲ್ಲ. ಆಗಿನ ಜಿಲ್ಲಾಧಿಕಾರಿ, ಚುನಾವಣಾಧಿಕಾರಿಗಳ ಮೇಲೆ ಏಕೆ ದೂರು ನೀಡಿಲ್ಲ ಎಂದು ಪ್ರಶ್ನಿಸಿದರು. ಜೀವರಾಜ್ ಶಾಸಕರಾಗಿ ಆಯ್ಕೆ ಘೋಷಣೆ ರದ್ದು ಪಡಿಸಬೇಕು.

ಗುರು ವಾರ 3 ತಾಲೂಕಿನ ಕಾಂಗ್ರೆಸ್ ಕಾರ್ಯಕರ್ತರು ಬೆಂಗಳೂ ರಿಗೆ ತೆರಳಿ ಈಗಿನ ಫಲಿತಾಂಶ ತಡೆ ಹಿಡಿಯಲು ಚುನಾವಣಾ ಆಯೋಗಕ್ಕೆ ಮನವಿ ನೀಡಲಾ ಗುವುದು ಎಂದರು.

ಕೆಡಿಪಿ ಸದಸ್ಯ ಕೆ.ವಿ.ಸಾಜು ಮಾತನಾಡಿ, 2023ರಲ್ಲಿ ಅಂಚೆ ಮತ ಎಣಿಕೆ ಯಾಗುವಾಗ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಏಜೆಂಟರು ಹಾಕಿದ್ದಾರೆ. ಆಗ ಸಿಂಧು ಆಗಿದ್ದ ಮತ ಗಳು ಈಗ ತಿರಸ್ಕತವಾಗಿದ್ದು ಹೇಗೆ? ಎಂದರು.

ಕಾಂಗ್ರೆಸ್ ತಾಲೂಕು ಸಮಿತಿ ಸದಸ್ಯ ಎಚ್.ಎಂ.ಮನು ಕ್ರಿಮಿನಲ್ ವ್ಯವ ಹಾರ ನಡೆದಿದೆ ಎಂಬ ಅನುಮಾನ ಕಾಡುತ್ತಿದೆ.ಚುನಾವಣಾ ಆಯೋಗ ಮಧ್ಯ ಪ್ರವೇಶಿಸಿ 2023 ರಲ್ಲಿ 3 ಪಕ್ಷದ ಚುನಾವಣಾ ಏಜೆಂಟರಾಗಿದ್ದವರು ದೇವಸ್ಥಾನಕ್ಕೆ ಬಂದು ಜನರಿಗೆ ಸತ್ಯ ತಿಳಿಸಬೇಕು ಎಂದರು.

ಕಾಂಗ್ರೆಸ್ ಮುಖಂಡರಾದ ಎಸ್.ಡಿ. ರಾಜೇಂದ್ರ,ಬೆನ್ನಿ,ಅಂಜುಂ, ಪಾನಿ ಶ್ರೀಧರ್, ಎಚ್.ಎಂ.ಶಿವಣ್ಣ,ಗಂಗಾಧರ್, ಎಚ್.ಇ. ಮಹೇಶ್, ಸಿಬು, ಸುಬ್ರಮಣ್ಯ, ವಾಸಿಂ,ಕುರಿಯಾಕೋಸ್, ಗಣೇಶ, ದೇವಂತ,ಮಂಜಣ್ಣ ಮತ್ತಿತರರು ಇದ್ದರು.

ಕ್ರಿಮಿನಲ್ ಪ್ರಕರಣ ದಾಖಲಿಸಿ: ಒತ್ತಾಯ

ನರಸಿಂಹರಾಜಪುರದಲ್ಲಿ ಟಿ.ಡಿ. ರಾಜೇಗೌಡರ ಭಾವಚಿತ್ರವಿದ್ದ ಫಲಕ ವನ್ನು ಬಿಜೆಪಿ ಕಾರ್ಯಕರ್ತರು ಕಿತ್ತು ಹಾಕಿದ್ದು, ಇಂತಹ ಕೃತ್ಯ ಎಸಗಿ ರುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದ ಎಚ್.ಎಚ್. ದೇವರಾಜ್, ಡಿ.ಎನ್.ಜೀವ ರಾಜ್ ಪರ ಕಾರ್ಯಕರ್ತರು ಇದೇ ರೀತಿ ಗೂಂಡಾಗಿರಿ ಮುಂದು ವರಿಸಿದರೇ, ಜೀವರಾಜ್ ಚಿಕ್ಕಮಗಳೂರಿಗೆ ಬರಲು ಬಿಡುವುದಿಲ್ಲ ಎಂದು ಎಚ್ಚರಿಸಿದರು. ಜೀವ ರಾಜ್‌ಗೆ ಚುನಾವಣಾ ಆಯೋಗ ಸರ್ಟಿಫಿಕೇಟ್ ನೀಡಿದ್ದು ಕಾನೂನು ಬಾಹಿರ ಎಂದರು.

ನಿಷ್ಪಕ್ಷಪಾತ ತನಿಖೆಗೆ ಆಗ್ರಹ

ಶೃಂಗೇರಿ: ಅಂಚೆ ಮತಗಳ ಮರು ಎಣಿಕೆಯಲ್ಲಿ ಮೋಸ ನಡೆದಿದ್ದು ಈ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆದು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎಂ. ರಮೇಶ್ ಭಟ್ ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಭವನದ ಸುದ್ದಿ ಗೋಷ್ಠಿ ಯಲ್ಲಿ ಮಾತನಾಡಿ ನ್ಯಾ ಯಾಲಯ ಮರುಎಣಿಕೆಗೆ ಆದೇಶ ನೀಡಿದ್ದರೂ ಎಣಿಕೆ ಮಾತ್ರ ಸರಿ ಯಾಗಿ ನಡೆದಿಲ್ಲ. ಹಿಂದಿನ ಎಣಿಕೆ ಯಲ್ಲಿ ಶಾಸಕ ರಾಜೇಗೌಡರು 201 ಮತಗಳ ಅಂತರದಿಂದ ಗೆದ್ದಿದ್ದರು. ಮೊನ್ನೆಯ ಮರು ಎಣಿಕೆ ವೇಳೆಯಲ್ಲಿ ಸ್ಟ್ರಾಂಗ್ ರೂಂ ತೆರೆದಿತ್ತು, ಟ್ರಂಕ್ ಗಳ ಬೀಗ ಒಡೆಯಲಾಗಿತ್ತು. ರಾಜೇ ಗೌರ ಮತಗಳು ಮಾತ್ರ ಅಸಿಂದು ವಾಗಿದ್ದು ಉಳಿದೆಲ್ಲರ ಮತಗಳು ಸಿಂಧುವಾಗಿತ್ತು.ಎಣಿಕೆ ದಿನವೇ ನಾವು ಆಕ್ಷೇಪ ವ್ಯಕ್ತಪಡಿಸಿದ್ದೇವೆ.

ಫಲಿತಾಂಶ ನ್ಯಾಯಾಲಯಕ್ಕೆ ಕಳು ಹಿಸಿದ್ದೇವೆ ಎಂದು ಹೇಳಿ ರಾತ್ರೋ ರಾತ್ರಿ ಜೀವರಾಜ್ ಗೆದ್ದಿದ್ದಾರೆಂದು ಇ ಮೇಲ್ ಸಂದೇಶ ಕಳುಹಿಸಿ ರಾತ್ರಿಯೇ ಪ್ರಮಾಣ ಪತ್ರ ನೀಡಿದ್ದಾರೆ. ಅಂತಹ ಅವಶ್ಯಕತೆ ಏನಿತ್ತು. ರಾಜೇಗೌಡರಿಗೆ ಅನ್ಯಾಯವಾಗಿದೆ. ಸೋಲಿಸುವ ಉದ್ದೇ ಶದಿಂದ ಈ ಕೃತ್ಯ ಎಸಗಲಾಗಿದೆ.

ಈ ಬಗ್ಗೆ ತನಿಖೆ ಯಾಗಬೇಕು ಎಂದರು. ಉಮೇಶ್ ಪುದುವಾಳ್,ದಿನೇಶ್ ಹೆಗ್ಡೆ,ಪುಟ್ಟಪ್ಪ ಹೆಗ್ಡೆ,ಭಾಸ್ಕರ್‌ನಾಯಕ್, ಮುರುಳಿ ಧರ ,ದೇವೇಂದ್ರ,ಕೆ.ಟಿ.ಮಂಜುನಾಥ್ ಮತ್ತಿತರರು ಇದ್ದರು.

ಸುದ್ದಿ ಸಿಂಚನ

3 ಪ್ರತ್ಯೇಕ ಅಪಘಾತ: ಮೂವರ ದುರ್ಮರಣ

ಕಡೂರು: ಮೂರು ಪ್ರತ್ಯೇಕ ಪ್ರಕರಣಗಳಡಿ ಸ್ಕೂಟಿ ಮತ್ತು ದ್ವಿಚಕ್ರ ವಾಹನಗಳಲ್ಲಿ ನಿಯಂತ್ರಣ ತಪ್ಪಿ ಸಂಭವಿಸಿದ ಅಪಘಾತದಲ್ಲಿ ಮೂವರು ಮೃತಪಟ್ಟ ಘಟನೆ ಕಡೂರು ಠಾಣೆ ವ್ಯಾಪ್ತಿಯಲ್ಲಿ ನಡೆ ಸಿದೆ. ತಾಲೂಕಿನ ಅಂದೇನಹಳ್ಳಿ ಗ್ರಾಮದ ಚೇತನ್ (38) ಮೃತ ದುರ್ದೈವಿ. ಮೇ.4 ರಂದು ಪಟ್ಟಣದಿಂದ ಬೈಕಿನಲ್ಲಿ ಊರಿಗೆ ತೆರಳುವಾಗ ರಸ್ತೆ ಬಳಿ ನಿಲ್ಲಿಸಿದ್ದ ಸ್ಕೂಟಿಗೆ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಿದರೂ ಮಾರ್ಗ ಮಧ್ಯೆ ಮೃತಪಟ್ಟಿರುವುದಾಗಿ ಬಗ್ಗೆ ವೈದ್ಯರು ಧೃಡಪಡಿಸಿದ್ದಾರೆ.ಚಿಕ್ಕಿಂಗಳ ಗ್ರಾಮದಲ್ಲಿ ಮೇ 4 ರಂದು ಚಂದ್ರಪ್ಪ(54) ಎಂಬುವರು ತಮ್ಮ ಇಬ್ಬರು ಮೊಮ್ಮಕ್ಕಳೊಂದಿಗೆ ಸ್ಕೂಟಿಯಲ್ಲಿ ಎಚ್. ರಾಂಪುರ ಕಡೆಯಿಂದ ಬರುವಾಗ ರಸ್ತೆ ಮಧ್ಯೆ ಅಡ್ಡ ಬಂದ ನಾಯಿ ಯನ್ನು ತಪ್ಪಿಸಲು ಹೋಗಿ ಆಯತಪ್ಪಿ ಬಿದ್ದಿದ್ದು ಕಡೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗೆ ಶಿವ ಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟಿದ್ದು, ಇಬ್ಬರು ಮೊಮ್ಮಕ್ಕಳಿಗೂ ಸಣ್ಣಪುಟ್ಟ ಗಾಯಾಗಳಾಗಿ ಚಿಕಿತ್ಸೆ ಪಡೆಯುತ್ತಿರುವುದಾಗಿ ತಿಳಿದು ಬಂದಿದೆ. ಮಂಗಳವಾರ ಸಂಜೆ ಕಡೂರು ಪಟ್ಟಣದ ಹರು ವನಹಳ್ಳಿ ಸಮೀಪ ಚಲಿಸುತ್ತಿದ್ದ ಸಾರಿಗೆ ಬಸ್ಸನ್ನು ಓವರ್‌ಟೇಕ್ ಮಾಡಲು ಹೋಗಿ ಬಸ್ಸಿನ ಹಿಂಬದಿಗೆ ಡಿಕ್ಕಿಹೊಡೆದ ಪರಿಣಾಮ ಟಿವಿಎಸ್ ನ ನಿಯಂತ್ರಣ ತಪ್ಪಿ ರಸ್ತೆ ಮದ್ಯಕ್ಕೆ ಬಿದ್ದ ಹಿನ್ನಲೆಯಲ್ಲಿ ತಲೆಗೆ ಬಲವಾದ ಪೆಟ್ಟುಬಿದ್ದು ಕೇದಾರಪ್ಪ(35) ತೀವ್ರ ರಕ್ತ ಸ್ರಾವವಾಗಿ ಸ್ಥಳದಲ್ಲಿ ಮೃತಪಟ್ಟಿದ್ದಾರೆ. ಹಾವೇರಿ ಜಿಲ್ಲೆಯ ನೀಲುರ್ಗಿ ಗ್ರಾಮದ ಈತ ಗೆದ್ಲೇಹಳ್ಳಿ ಬಳಿ ಟೈಲ್ಸ್ ಕೆಲಸಕ್ಕೆಂದು ಕಳೆದ 3 ದಿನಗಳ ಹಿಂದೆ ಊರಿನಿಂದ ಆಗಮಿಸಿದ್ದನು.

ಹಾವು ಕಡಿದು ಸಾವು

ಕೊಪ್ಪ: ಬಹಿರ್ದೆಸೆಗೆ ಹೋದಾಗ ಹಾವು ಕಚ್ಚಿ ಯುವಕ ಮೃತಪಟ್ಟ ಘಟನೆ ನಡೆದಿದೆ. ಕೊಟ್ರೆಶ್(25) ಹಾವು ಕಡಿತದಿಂದ ಮೃತನಾದ ಯುವಕ. ಸೋಮವಾರ ಮನೆಯ ಟಾಯ್ಲೆಟ್‌ನಲ್ಲಿ ಕೊಟ್ರೆಶ್ ಬಹಿರ್ದೆಸೆಗೆ ಹೋದ ಸಮಯದಲ್ಲಿ ಅಲ್ಲಿದ್ದ ಹಾವು ಕಚ್ಚಿದೆ. ಕೂಡಲೇ ಕೊಪ್ಪ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ಕಳುಹಿಸಲಾಯಿತು. ಈತ ಬದುಕುವುದು ಕಷ್ಟ ಎಂದಾಗ ವಾಪಸು ಕೊಪ್ಪ ಆಸ್ಪತ್ರೆಗೆ ಕರೆತರಲಾಯಿತು.ಮತ್ತೆ ಶಿವ ಮೊಗ್ಗ ಆಸ್ಪತ್ರೆಗೆ ಕರೆದೊಯ್ಯುವಾಗ ಮೃತನಾಗಿದ್ದಾನೆ. ಕೊಪ್ಪದ ಬಪ್ಪುಂಜಿ ಎಸ್ಟೇಟ್‌ನಲ್ಲಿ ಬುಧವಾರ ಮೃತನ ಅಂತ್ಯಸಂಸ್ಕಾರ ನಡೆಯಿತು. ದಾವಣಗೆರೆ ಹರಪ್ಪನಹಳ್ಳಿಯ ನಿಜಗುಣ ಅವರ ಪುತ್ರ ಕೋಟ್ರೇಶ್. ನಿಜಗುಣ ಕೆಲವು ವರ್ಷಗಳ ಹಿಂದೆ ಬಪ್ಪುಂಜಿ ಎಸ್ಟೇಟ್‌ಗೆ ಕಾರ್ಮಿಕನಾಗಿ ಕೆಲಸಕ್ಕೆ ಸೇರಿಕೊಂಡರು. ಈತನ ಪತ್ನಿ ಕೊಟ್ರಮ್ಮ 2 ವರ್ಷಗಳ ಹಿಂದೆ ಕೆಎಫ್‌ಡಿ ಕಾಯಿಲೆಯಿಂದ ಮೃತರಾಗಿದ್ದರು.

ಸಚ್ಚಾರಿತ್ರ್ಯದ ರಾಜಕಾರಣ ಪ್ರಾರಂಭ: ನಾಗೇಶ್

ಬಾಳೆಹೊನ್ನೂರು: ಪಂಚ ರಾಜ್ಯಗಳ ಚುನಾವಣೆಯ ಫಲಿತಾಂಶ ಗಮನಿಸಿದಾಗ ದೇಶದಲ್ಲಿ ಸಚ್ಚಾರಿತ್ರ್ಯದ ರಾಜಕಾರಣ ಪ್ರಾರಂಭವಾಗುತ್ತಿರುವ ಸಂಕೇತವಾಗಿ ಕಾಣುತ್ತಿದೆ ಎಂದು ಪ್ರಜಾಪ್ರಭುತ್ವ ಉಳಿಸಿ ಆಂದೋಲನ ವೇದಿಕೆ ಸಂಚಾಲಕ ನಾಗೇಶ್ ಆಂಗೀರಸ ಹೇಳಿದ್ದಾರೆ.

ಪಶ್ಚಿಮ ಬಂಗಾಳ, ಪುದುಚೆರಿ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಎನ್‌ಡಿಎ ಮತ್ತು ಬಿಜೆಪಿಯ ಜಯ ಜನರು ರಾಷ್ಟ್ರೀಯವಾದಿಗಳಾಗುತ್ತಿರುವ ಸಂಕೇತವಾಗಿದೆ. ಬ್ರಿಟೀಷರ ಒಡೆದಾಳುವ ನೀತಿಯ ನಂತರದ 75 ವರ್ಷಗಳ ಭಾರತೀಯ ರಾಜಕಾರಣ ಭ್ರಷ್ಟಾಚಾರ, ಅನೈತಿಕತೆ, ಕೊಲೆ, ಸುಲಿಗೆ, ಅತ್ಯಾಚಾರದಂತಹ ಘೋರ ರೂಪ ಪಡೆದಿತ್ತು. ಆದರೆ ಇದೀಗ ಜನರು ಇಂತಹ ಅನೈತಿಕ ರಾಜಕಾರಣಕ್ಕೆ ಬೆಲೆ ನೀಡದೆ ಸಚ್ಚಾರಿತ್ರ್ಯ ರಾಜಕಾರಣಕ್ಕೆ ಒತ್ತು ನೀಡುತ್ತಿದ್ದಾರೆ. ಬಿಜೆಪಿ, ಎನ್‌ಡಿಎ ಮೈತ್ರಿಕೂಟಕ್ಕೆ ದೇಶದ ಸುಭದ್ರತೆಯ ಹಿತದೃಷ್ಟಿಯಿಂದ ಮತ ನೀಡುತ್ತಿದ್ದು, ದೇಶದ ಜನರು ದೇಶದಲ್ಲಿ ಕಠಿಣ ಕಾನೂನು, ಏಕರೂಪ ನಾಗರೀಕ ಸಂಹಿತೆ, ಎಸ್‌ಐಆರ್‌ಮುಂತಾದವುಗಳ ಸಮಗ್ರ ಜಾರಿಗಾಗಿ ಹಾತೊರೆಯುತ್ತಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಅನಾರೋಗ್ಯದ ಹಾಸಿಗೆ ಹಿಡಿದ ಕೊಪ್ಪ ತಾಲೂಕಿನ ಹೊಸಳ್ಳಿ ನಿವಾಸಿ ಮಂಜುನಾಥ ತಂದೆ ಕೃಷ್ಣಾಚಾರ್ ಅವರಿಗೆ ಅಮ್ಮ ಫೌಂಡೇಶನ್‌ನಿಂದ ವಾಟರ್‌ಬೆಡ್ ನೀಡಲಾಯಿತು. ಅಮ್ಮ ಫೌಂಡೇಶನ್ ನಿರ್ದೇಶಕ ಪ್ರಭಾಕರ್‌ಶೆಟ್ಟಿ, ಕಾರ್ಯ ನಿರ್ವಹಣಾಧಿಕಾರಿ ಗುರುಪ್ರಸಾದ್, ರಮೇಶ್ ಸಂಪೆಕೊಳಲು ಇದ್ದರು.

ಅಭಿವೃದ್ಧಿ ವಿಚಾರದಲ್ಲಿ ಬಹಿರಂಗ ಚರ್ಚೆಗೆ ಬನ್ನಿ

• **ಕನ್ನಡಪ್ರಭ ವಾರ್ತೆ** ತರೀಕೆರೆ

ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ನಾವು ಕಾಂಗ್ರೆಸ್‌ನಿಂದ ಬಹಿರಂಗ ಚರ್ಚೆ ಮತ್ತು ನೇರಾ ನೇರ ಚರ್ಚೆಗೆ ಸಿದ್ಧರಿದ್ದೇವೆ.

ತರೀಕೆರೆಯಲ್ಲಿ ಅಭಿವೃದ್ಧಿ ಆಗಿಲ್ಲ. ಮೌಲಾನ ಆಜಾದ್ ಸರ್ಕಾರಿ ಶಾಲೆ ಕಟ್ಟಡ, ತರೀಕೆರೆ ಬಿಎಚ್. ರಸ್ತೆ ಮತ್ತು ನೂತನ ಕೆ.ಎಸ್.ಆರ್.ಟಿ.ಸಿ.ಕಟ್ಟಡ ಕಳಪೆ ಕಾಮಗಾರಿ ಎಂದು ಟೀಕಿಸುವವರು ಸ್ಥಳ ನಿಗದಿಧಿ ಪಡಿಸಿ ಬಹಿರಂಗ ಚರ್ಚೆಗೆ ಬರಲಿ ಎಂದು ತರೀಕೆರೆ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಚ್.ಯು.ಫಾರೂಕ್ ಪಂಥಾಹ್ವಾನ ನೀಡಿದ್ದಾರೆ.



ತರೀಕೆರೆಯಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿ ಪತ್ರಿಕಾಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಚ್.ಯು.ಪಾರೂಕ್ ಮಾತನಾಡಿದರು. ಪುರಸಭೆ ಅಧ್ಯಕ್ಷ ವಸಂತಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಬುಧವಾರ ಬ್ಲಾಕ್ ಕಾಂಗ್ರೆಸ್ ಸಮಿತಿಯಿಂದ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಾಗರಿಕ ಹೋರಾಟ ಸಮಿತಿ ಮತ್ತಿತರ ಸಂಘಟನೆಯಿಂದ ಮೌಲಾನಾ ಆಜಾದ್ ಸರ್ಕಾರಿ ಶಾಲೆ ಕಟ್ಟಡ ಮತ್ತಿತರ ಕಾಮಗಾರಿಯನ್ನು ಕಳಪೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದ ಹಿನ್ನೆಲೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಅಭಿವೃದ್ಧಿ ವಿಚಾರದಲ್ಲಿ ಜನರ ಎದುರೇ ನೇರಾ ನೇರ ಚರ್ಚೆ ನಡೆಯಲಿ. ಜನರಿಗೆ ಸತ್ಯಾಸತ್ಯತೆ ತಿಳಿಯಬೇಕು. ಪ್ರಶ್ನೆ ಮಾಡುವುದು ತಪ್ಪಲ್ಲ ಎಂದರು.

ಮೌಲಾನ ಆಜಾದ್ ಸರ್ಕಾರಿ ಶಾಲೆ ಕಟ್ಟಡಕ್ಕೆ ಶಾಸಕ ಜಿ.ಎಚ್.ಶ್ರೀನಿವಾಸ್ ₹3.90 ಕೋಟಿ ಸರ್ಕಾರದಿಂದ ಮಂಜೂರು ಮಾಡಿಸಿ ಟೆಂಡರ್ ಕರೆದು ಕಟ್ಟಡ ನಿರ್ಮಿಸಲು ಗುತ್ತಿಗೆದಾರರಿಗೆ ವಹಿಸಲಾಗಿದೆ. ಮಾಜಿ ಶಾಸಕ ಡಿ.ಎಸ್. ಸುರೇಶ್, ಸಂಸದೆ ಶೋಭಾ ಕರಂದ್ಲಾಜೆ ಅವರು ಅಷ್ಟು ವರ್ಷಗಳ ಅಧಿಕಾರದಲ್ಲಿ ಬಿ.ಎಚ್.ರಸ್ತೆ ಗುಂಡಿ ಮುಚ್ಚಿಸಲಾಗಲಿಲ್ಲ. ಆದರೆ ಶಾಸಕ ಜಿ.ಎಚ್.ಶ್ರೀನಿವಾಸ್ ಚುನಾವಣಾ ಪೂರ್ವದಲ್ಲಿ ಭರವಸೆ ಕೊಟ್ಟಂತೆ ಚತುಷ್ಪದ ರಸ್ತೆ ನಿರ್ಮಿಸುತ್ತಿದ್ದಾರೆ. ಮಾಜಿ ಶಾಸಕ ಡಿ.ಎಸ್.ಸುರೇಶ್ ಎರಡು ಬಾರಿ ಶಾಸಕರಾದವರು ತೂಕವಾಗಿ ಮಾತನಾಡಬೇಕಿತ್ತು. ಸಣ್ಣ ಪುಟ್ಟ ದೋಷ ಇದ್ದರೆ ಅದನ್ನು ಸರಿಪಡಿಸಿ ಎಂದು ಮಾಜಿ ಶಾಸಕರಾಗಿ ಹೇಳಬಹುದಿತ್ತು ಎಂದು ಹೇಳಿದರು.

ಪ್ರತಿಭಟನಾ ಮೆರವಣಿಗೆಯಲ್ಲಿ ಶಾಸಕ ಜಿ.ಎಚ್. ಶ್ರೀನಿವಾಸ್ ಅವರ ಧರ್ಮಪತ್ನಿ, ಪುತ್ರಿ ಬಗ್ಗೆ ಮಾತನಾಡಿರುವುದನ್ನು ಖಂಡಿಸುತ್ತೇವೆ ಎಂದರು.

ನಗರ ಕಾಂಗ್ರೆಸ್ ಅಧ್ಯಕ್ಷ ಟಿ.ಎಸ್.ಪ್ರಕಾಶ್ ವರ್ಮ ಮಾತನಾಡಿ ಮೌಲಾನಾ ಆಜಾದ್ ಸರ್ಕಾರಿ ಶಾಲೆ ಕಟ್ಟಡ ಕಾಮಗಾರಿ ಪರಿಶೀಲಿಸಲು ಪ್ರತಿ ಯೊಬ್ಬರಿಗೂ ಹಕ್ಕಿದೆ. ಕಾಮಗಾರಿ ಸಂಬಂಧಿಸಿದ ಇಲಾಖೆ ಬಳಿ ಮಾತನಾಡಬಹುದಿತ್ತು. ಎಲ್ಲ ಕಡೆ ಕಾಮ ಗಾರಿಗಳಲ್ಲಿ ಗುಣಮಟ್ಟ ಕಾಪಾಡಬೇಕೆಂಬುದು ಕಾಂಗ್ರೆಸ್ ಪಕ್ಷ ಮತ್ತು ನಮ್ಮ ಆಶಯ. ಶಾಸಕ ಜಿ.ಎಚ್.ಶ್ರೀನಿವಾಸ್ ನಮ್ಮ ನಾಯಕರು. ಅವರನ್ನು ಜನ ಆಯ್ಕೆ ಮಾಡಿದ್ದಾರೆ, ಅವರ ಮತ್ತು ಕುಟುಂಬದ ಬಗ್ಗೆ ಮಾತನಾಡುವುದು ಸರಿಯಲ್ಲ. ತಪ್ಪು ಕಾಪರ್‌ವೈರ್‌ಬಗ್ಗೆ ಇಲಾಖೆ ಹೇಳಬೇಕು. ಶಾಸಕ ಶ್ರೀನಿವಾಸ್ ಪುರಸಭೆ ಅಭಿವೃದ್ಧಿಗೆ ₹54 ಕೋಟಿ ಅನುದಾನ ತಂದಿದ್ದಾರೆ. ಅವರು ಪಟ್ಟಣವನ್ನು ಅಭಿವೃದ್ಧಿ ಪಡಿಸು ತ್ತಿದ್ದಾರೆ ಎಂದು ಹೇಳಿದರು.

ಪುರಸಬೆ ಅಧ್ಯಕ್ಷ ವಸಂತಕುಮಾರ್‌ಮಾತನಾಡಿ, ಶಾಸಕ ಜಿ.ಎಚ್.ಶ್ರೀನಿವಾಸ್ ನಿರ್ವಹಿಸುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಸಹಿಸಲಾರದೆ ಈ ರೀತಿ ಮಾತನಾಡುತ್ತಿದ್ದಾರೆ. ನಾವೆಲ್ಲಾ ಒಗ್ಗಟ್ಟಾಗಿದ್ದೇವೆ ಎಂದು ಹೇಳಿದರು.ಜಿಲ್ಲಾ ಕೆಡಿಪಿ ಸದಸ್ಯ ಸಿರಾಜ್, ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷೆ ಹೇಮಲತಾ ರೇವಣ್ಣ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪರ್ವಿನ್ ತಾಜ್, ಕಾಂಗ್ರೆಸ್ ಕಿಸಾನ್ ಸೆಲ್ ತಾಲೂಕು ಅಧ್ಯಕ್ಷ ಗಿರೀಶ್,ಕೆಪಿಸಿಸಿ ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಟಿ.ಆರ್. ಶ್ರೀಧರ್, ಕಸಬಾ ಹೋಬಳಿ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವೀರಮಣಿ, ತಾಲೂಕು ಕಾಂಗ್ರೆಸ್ ಸೇವಾದಳ ಅಧ್ಯಕ್ಷ ಟಿ.ಎನ್. ಜಗದೀಶ್, ಲಕ್ಕವಳ್ಳಿ ಹೋಬಳಿ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎನ್.ಮಂಜುನಾಥ್ ಲಾಡ್, ಮೈನಾರಿಟಿ ಸೆಲ್ ಅಧ್ಯಕ್ಷ ಇರ್ಷಾದ್, ಪುರಸಭೆ ನಾಮಿನಿ ಸದಸ್ಯ ಆದಿಲ್ ಪಾಷ, ಎಸ್.ಸಿ.ಸೆಲ್ ಅಧ್ಯಕ್ಷ ಗೌರೀಶ್, ಮುಖಂಡರಾದ ರಾಘವೇಂದ್ರ ಭಾಗವಹಿಸಿದ್ದರು.

ಕಿವಿಗಳ ಆರೋಗ್ಯದ ಕಾಳಜಿ ವಹಿಸಿ

ಶೃಂಗೇರಿ: ಪಂಚೇಂದ್ರಿಯಗಳಲ್ಲಿ ಪ್ರಮುಖ ಅಂಗವಾಗಿರುವ ಕಿವಿ ಮನುಷ್ಯನಿಗೆ ಬಹುಮುಖ್ಯ ಅಂಗ. ಕಿವಿಗಳ ಆರೋಗ್ಯದ ಬಗ್ಗೆ ಪ್ರತಿಯೊಬ್ಬರೂ ಕಾಳಜಿ ವಹಿಸಬೇಕು ಎಂದು ಇಎನ್ ಟಿ ತಜ್ಞ ಡಾ.ಲವಬಂಗೇರಾ ಸಲಹೆ ನೀಡಿದರು.ಪಟ್ಟಣದ ಬಿಜಿಎಸ್ ಆವರಣದಲ್ಲಿ ಟೀಮ್ ಈಶ್ವರ್‌ಮಲ್ಪೆ,ಲಯನ್ಸ್ ಹಾಗೂ ಮಹಿಳಾ ಒಕ್ಕಲಿಗರ ಸಂಘ ,ಲಯನ್ಸ್ ಸಹಯೋಗದ ಉಚಿತ ಶ್ರವಣ ಶಿಬಿರದಲ್ಲಿ ಮಾಹಿತಿ ನೀಡಿ ಮಾತನಾಡಿದರು. ಕಿವಿಗಳು ಮನುಷ್ಯನ ಎಲ್ಲಾ ಚಟುವಟಿಕೆಗಳಿಗೆ ಬಹುಮುಖ್ಯ. ಆದ್ದರಿಂದ ಕಿವಿಗಳ ರಕ್ಷಣೆಗೆ ಹೆಚ್ಚಿನ ಮಹತ್ವ ನೀಡಬೇಕು ಎಂದರು. ಪ್ರತಿ 6 ತಿಂಗಳಿಗೊಮ್ಮೆಯಾದರೂ ಆಗಾಗ ಕಿವಿಗಳ ತಪಾಸಣೆ ಮಾಡಿಸಿ. ವೈದ್ಯರ ಸಲಹೆ ಇಲ್ಲದೇ ಕಿವಿಗೆ ಅನಗತ್ಯ ವಸ್ತುಗಳನ್ನು, ಎಣ್ಣೆ ಹಾಕಬಾರದು ಎಂದರು. ಗಾಯಿತ್ರಿ ,ಡಾ.ಅಂಕಿತಾ ಕಲ್ಮುಡಿ,ಧರ್ಮಪ್ಪ ಹೆಗ್ಡೆ,ಕವಿತಾ,ಸೌಮ್ಯ ಶ್ಯಾಮಿಲಿ ,ಲೀಲಾ ಇದ್ದರು.

ಚುನಾವಣೆ ಸಾಧನೆ: ಬಿಜೆಪಿ ಬೈಕ್ ರ್‍ಯಾಲಿ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಪಂಚ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಸಾಧನೆ ಮಾಡಿದ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ನಗರದಲ್ಲಿ ಬುಧವಾರ ನಗರದ ಪ್ರಮುಖ ಬೀದಿಗಳಲ್ಲಿ ಬಿಜೆಪಿ ಮುಖಂಡರು ಕಾರ್ಯಕರ್ತರು ಬೈಕ್ ರ್‍ಯಾಲಿ ನಡೆಸಿ ಸಂಭ್ರಮಿಸಿದರು.



ಬಿಜೆಪಿ ಕಚೇರಿಯಿಂದ ಹೊರಟ ಬೈಕ್ ರ್‍ಯಾಲಿ ಬೋಳರಾಮೇಶ್ವರ ದೇವಸ್ಥಾನ, ಐಜಿ ರಸ್ತೆ, ಬಸವನಹಳ್ಳಿ ಮುಖ್ಯರಸ್ತೆ, ಎಂ.ಜಿ.ರಸ್ತೆ, ಮಾರ್ಗವಾಗಿ ಸಾಗಿ ಅಂತಿಮವಾಗಿ ಆಜಾದ್ ಪಾರ್ಕ್ ಬಳಿ ಕೊನೆಗೊಂಡಿತ್ತು.

ಈ ವೇಳೆ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ದೇವರಾಜ್ ಶೆಟ್ಟಿ, ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಜಯ ಗಳಿಸಿದೆ. ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಸುಮಾರು 200ಕ್ಕೂ ಅಧಿಕ ಸ್ಥಾನ ಗಳಿಸಿದೆ. ಬಂಗಾಳದಲ್ಲಿ ನಡೆಯುತ್ತಿರುವ ನರಮೇದಗಳಿಗೆ ಮುಕ್ತಿ ನೀಡುವ ಕೆಲಸವನ್ನು ಪ್ರಧಾನಿ ಮೋದಿ- ಅಮಿತ್ ಷಾ ಮಾಡ ಲಿದ್ದಾರೆ. ಪಾಂಡೀಚರಿ-ಅಸ್ಸಾಂನಲ್ಲಿಯೂ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದರು. ಬೈಕ್ ಜಾತಾ ನಡೆಸುವ ಮೂಲಕ ಸಂಭ್ರಮ ಆಚರಣೆ ಮಾಡುತ್ತಿದ್ದೇವೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಪಕ್ಷದ ಮೇಲೆ ವಿಶ್ವಾಸವಿಟ್ಟು ಮತ ಚಲಾವಣೆ ಮಾಡಿರುವ ಮೂರು ರಾಜ್ಯದ ಜನರಿಗೆ ಕೃತಜ್ಞತೆ ಸಲ್ಲಿಸಿದರು. ವಿಶೇಷವಾಗಿ ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ವಿಭಾಗದ ಸಭಾ ಕ್ಷೇತ್ರದಲ್ಲಿ ಮರು ಮತ ಎಣಿಕೆ ಮೂಲಕ ಡಿ.ಎನ್.ಜೀವ ರಾಜ್ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಸತ್ಯಮೇವ ಜಯತೆ ಎಂಬಂತೆ ಜೀವರಾಜ್ ಮತ್ತೆ ಶಾಸಕರಾಗಿ ಅವಕಾಶ ಮಾಡಿಕೊಡಲಾಗಿದೆ ಎಂದು ಹೇಳಿದರು.

ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಹಗಲಿರುಳು ಶ್ರಮಿಸಿರುವ ಜನಪರ, ಸಮಾಜ ಮುಖಿ ಹೋರಾಟಗಾರ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್ ಯಡಿಯೂರಪ್ಪ ಅವರನ್ನು ಪಕ್ಷ ಹಾಗೂ ನಾಡಿನ ಜನತೆ ಪರವಾಗಿ ಅಭಿನಂದಿಸಲು ನಿರ್ಧರಿಸಲಾಗಿದೆ.

• **ಬೆಳ್ಳಿ ಪ್ರಕಾಶ್** ಸಂಚಾಲಕ, ಮಾಜಿ ಶಾಸಕ.

ಬಿಎಸ್‌ವೈ ಅಭಿಮಾನೋತ್ಸವಕ್ಕೆ 25000ಕ್ಕೂ ಅಧಿಕ ಮಂದಿ ಭಾಗಿ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಚಿತ್ರದುರ್ಗದಲ್ಲಿ ಮೇ 9ಕ್ಕೆ ಹಮ್ಮಿಕೊಂಡಿರುವ ಬಿಎಸ್‌ವೈ ಅಭಿಮಾನೋತ್ಸವಕ್ಕೆ ಚಿಕ್ಕಮಗಳೂರು ಜಿಲ್ಲೆಯಿಂದ ಬರೋಬ್ಬರಿ 25 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ಮಾಜಿ ಶಾಸಕ ಹಾಗೂ ಅಭಿಮಾನೋತ್ಸವ ಸಮಿತಿ ಸಂಚಾಲಕ ಬೆಳ್ಳಿ ಪ್ರಕಾಶ್ ತಿಳಿಸಿದರು.



ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಹಿರಿಯ ರಾಜಕೀಯ ಮುತ್ಸದ್ದಿ ಹಾಗೂ ಮಾಜಿ ಮುಖ್ಯ ಮಂತ್ರಿ ಬಿ.ಎಸ್ ಯಡಿಯೂರಪ್ಪ ಜನ ಸೇವೆ ಬದುಕಿಗೆ 50 ವರ್ಷಗಳು ತುಂಬಿರುವ ಸವಿ ನೆನಪಿಗೆ ಮೇ 9 ರಂದು ಚಿತ್ರದುರ್ಗದಲ್ಲಿ ಬೃಹತ್ ಬಿಎಸ್‌ವೈ ಅಭಿಮಾನೋತ್ಸವ ಆಯೋಜಿಸಲಾಗಿದೆ.

ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಹಗಲಿರುಳು ಶ್ರಮಿಸಿರುವ ಜನಪರ, ಸಮಾಜ ಮುಖಿ ಹೋರಾಟಗಾರ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್ ಯಡಿಯೂರಪ್ಪ ಅವರನ್ನು ಪಕ್ಷ ಹಾಗೂ ನಾಡಿನ ಜನತೆ ಪರವಾಗಿ ಅಭಿನಂದಿಸಲು ನಿರ್ಧರಿಸಲಾಗಿದೆ ಎಂದರು.

ಮೇ 9ರ ಮಧ್ಯಾಹ್ನ 12 ಕ್ಕೆ ಕಾರ್ಯಕ್ರಮವನ್ನು ಕೇಂದ್ರ ಗೃಹಸಚಿವ ಅಮಿತ್ ಶಾ ಉದ್ಘಾಟಿಸಲಿದ್ದು, ಮಾಜಿ ಉಪ ಮುಖ್ಯ ಮಂತ್ರಿ ಗೋವಿಂದ ಕಾರಜೋಳ ಅಧ್ಯಕ್ಷತೆ ವಹಿಸಲಿದ್ದಾರೆ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಎಚ್.ಡಿ ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಸಂಸದರಾದ ಜಗದೀಶ್ ಶೆಟ್ಟರ್, ಬಸವರಾಜ್ ಬೊಮ್ಮಾಯಿ, ವಿಪಕ್ಷ ನಾಯಕ ಆರ್, ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ನಾಡಿನ ಅನೇಕ ಸಿದ್ಧಗಂಗಾ ಶ್ರೀ, ರಂಭಾಪುರಿ ಶ್ರೀ ಸೇರಿದಂತೆ ಹೆಸರಾಂತ ಮಠಾಧೀಶರು ಪಕ್ಷದ ಹಿರಿಯ ನಾಯಕರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಚಿಕ್ಕಮಗಳೂರು ಜಿಲ್ಲೆಯಿಂದ 25 ಸಾವಿರಕ್ಕೂ ಹೆಚ್ಚಿನ ಕಾರ್ಯಕರ್ತರು ಅಭಿಮಾನೋತ್ಸವದಲ್ಲಿ ಭಾಗವಹಿಸುವ ನಿರೀಕ್ಷೆ ಇದ್ದು ಸುಮಾರು 10 ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು, ಬಿಎಸ್‌ವೈ ಅಭಿಮಾನಿಗಳು, ಹಿತೈಷಿಗಳು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಆರ್‌ದೇವರಾಜ್ ಶೆಟ್ಟಿ ಮಾತನಾಡಿ, ಪಂಚರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟಗೊಂಡು ಪಶ್ಚಿಮ ಬಂಗಾಳ, ಪುದುಚೆರಿ, ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ಹಿಡಿಯಲಿದೆ. ಪಕ್ಷದ ಪರವಾಗಿ ಜನಾದೇಶ ನೀಡಿದ ಮತದಾರರಿಗೆ ಧನ್ಯವಾದ ಹೇಳುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ನಗರಮಂಡಲ ಅಧ್ಯಕ್ಷ ಕೆ.ಎಸ್ ಪುಷ್ಪರಾಜ್, ವಕ್ತಾರ ಹೆಚ್.ಎಸ್ ಪುಟ್ಟಸ್ವಾಮಿ, ಮಾಧ್ಯಮ ಪ್ರಮುಖ್ ದಿನೇಶ್ ಕೋಟೆ, ಮುಖಂಡರಾದ ಚಂದ್ರು, ಚಮಿನ್ ಉಪಸ್ಥಿತರಿದ್ದರು.

ತರಬೇತಿಗೆ ಅರ್ಜಿ

ಚಿಕ್ಕಮಗಳೂರು: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಆಗಸ್ಟ್- 2016ನೇ ಸಾಲಿಗೆ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ (ಐಟಿಐ) ಸರ್ಕಾರದ ಆದೇಶದಂತೆ ಮೆಂಟ್-ಕಂ-ರಿಸರ್ವೇಶನ್ ಆಧಾರಿತ ಪ್ರವೇಶಗಳನ್ನು ಆನ್ಲೈನ್ ಮೂಲಕ ಅರ್ಜಿ ಸಲ್ಲಿಕೆಗೆ ಅಧಿಸೂಚನೆ ಹೊರಡಿಸಿದೆ.

ಇದೇ ಆಗಸ್ಟ್ 1ಕ್ಕೆ 14 ವರ್ಷ ಮೇಲ್ಪಟ್ಟ ವಯೋಮಿತಿ ಅಭ್ಯರ್ಥಿಗಳು ಸಿಟಿಎಸ್ ಮತ್ತು ಉದ್ಯೋಗ ಯೋಜನೆಯಡಿ ತಾಂತ್ರಿಕ ಹಾಗೂ ತಾಂತ್ರಿಕೇತರ ವೃತ್ತಿಗಳಿಗೆ ರಾಜ್ಯದ ಯಾವುದೇ ಭಾಗದಿಂದ ಮೇ 8 ಒಳಗೆ ಇಲಾಖೆ ವೆಬ್‌ಸೈಟ್‌ನಲ್ಲಿ ಆನ್ಲೈನ್ ಮೂಲಕ (www.cite.karnataka.gov.in) ನಲ್ಲಿ ಸಲ್ಲಿಸಬಹುದು ಎಸ್ಎಸ್ಎಸ್ಎಲ್ಸಿ ಉತ್ತೀರ್ಣ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಯಾವುದೇ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಅರ್ಜಿ ಸಲ್ಲಿಸಬಹುದು. ಪ್ರಸ್ತುತ ಚಿಕ್ಕಮಗಳೂರು ನಗರ ಜಿಪಂ ಸಮೀಪ (ಜ್ಯೋತಿನಗರ)ದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ2 ವರ್ಷದ ಅವಧಿ ವೃತ್ತಿಗಳಾದ ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್, ಫಿಟ್ಟರ್, ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್, ಅಡ್ವಾನ್ಸ್ಡ್ ಸಿಎನ್ಸಿ ಮೆಷಿನಿಂಗ್, ವರ್ಚುವಲ್ ಅನಾಲಿಸಿಸ್ ಮತ್ತು ಡಿಸೈನರ್, ಒಂದು ವರ್ಷದ ಅವಧಿಯ ವೃತ್ತಿಗಳಾದ ವೆಲ್ಡರ್, ಮ್ಯಾನುಫ್ಯಾಕ್ಚರಿಂಗ್ ವಿವರ ಹಾಗೂ / ಅಥವಾ ಸಂಸ್ಥೆಯನ್ನು ಕಚೇರಿ ವೇಳೆಯಲ್ಲಿ (ದೂ. ಸಂಖ್ಯೆ:08262-298010, 7019174607, 9738825105, 9035655692, 7849004987) ಸಂಪರ್ಕಿಸಬಹುದು ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬ್ಯೂಟಿ ಪಾರ್ಲರ್‌ಗಳ ತಪಾಸಣೆ

ಶಿವಮೊಗ್ಗ: ನಗರದ ಸ್ಪಾಗಳಲ್ಲಿ ಅಕ್ರಮ ಚಟುವಟಿಕೆ ಆರೋಪ ಹಿನ್ನೆಲೆ ಪೊಲೀಸರು ನಗರದ ವಿವಿಧ ಬ್ಯೂಟಿ ಪಾರ್ಲರ್‌ಗಳಲ್ಲಿ ತಪಾಸಣೆ ನಡೆಸಿದ್ದಾರೆ. ಎಸ್‌ಪಿ ನಿಖಿಲ್ ಬಿ. ಸೂಚನೆ ಮೇರೆಗೆ ಶಿವಮೊಗ್ಗ ದೊಡ್ಡಪೇಟೆ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ.

